محمد رسول الله

# ಮುಹಮ್ಮದ್

صلى الله عليه وسلم

## ಇಸ್ಲಾಮಿನ ಸಂದೇಶವಾಹಕ



CIS Welfare Trust®

# ಮುಹಮ್ಮದ್ (ﷺ)

# ಇಸ್ಲಾಮಿನ ಸಂದೇಶವಾಹಕ

**ಪ್ರೊ. ಡಾ. ಮುಹಮ್ಮದ್ ಬಿನ್ ಅಬ್ದುಲ್ಲಾ ಅಸ್ಸುಹೈಮ್**

ಮಾಜಿ ಅಧ್ಯಾಪಕರು, ಇಸ್ಲಾಮಿಕ್ ಸ್ಟಡೀಸ್ ವಿಭಾಗ (ಅಕೀದಾ),
ಕುಲ್ಲಿಯತುತ್ತರ್ಬಿಯಾ, ಕಿಂಗ್ ಸವೂದ್ ವಿಶ್ವವಿದ್ಯಾಲಯ,
ರಿಯಾದ್, ಸೌದಿ ಅರೇಬಿಯ

**ಅನುವಾದ: ಮಕ್ಸೂದ್ ಅಹ್ಮದ್ ಉಮ್ರಿ ನರ್ಘೀರಿ**

CIS Welfare Trust®
BENGALURU - 560 084
www.ciswt.in

ALL RIGHTS RESERVED © جميع الحقوق محفوظة

No part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the publisher

---

**1st Edition : June 2022**

---

All Copyrights reserved to CIS Welfare Trust , Bangalore

---

Author: Prof. Dr. Muhammad Bin Abdullah as-Suhaim
Translator: Maqsood Ahmed Umri Nazeeri

---

---

For Free Distribution Only - Not for Sale
ಉಚಿತ ವಿತರಣೆಗಾಗಿ - ಮಾರಾಟ ಮಾಡಬಾರದು

---



# ಇಸ್ಲಾಮಿನ ಸಂದೇಶವಾಹಕ ಮುಹಮ್ಮದ್ (ﷺ)

ಇದು ಇಸ್ಲಾಮಿನ ಸಂದೇಶವಾಹಕರಾದ ಮುಹಮ್ಮದ್(ﷺ) ರವರ[1] ಸಂಕ್ಷಿಪ್ತ ಸಾರಾಂಶ. ಇದರಲ್ಲಿ ನಾನು ಅವರ ಹೆಸರು, ಅವರ ವಂಶ, ಅವರ ಊರು, ಅವರ ಮದುವೆ,

---

1 ಪ್ರವಾದಿ ಹಾಗೂ ಮುಹಮ್ಮದ್ ಎಂಬ ಎರಡೂ ಪದಗಳ ಅನುವಾದವನ್ನು ಪರಿಗಣನೆಗೆ ತೆಗೆದುಕೊಂಡು ಯಾವಾಗಲೂ ಒಂದೇ ಕಡೆ ಒಟ್ಟುಗೂಡಿಸುವುದನ್ನು ನಾನು ಇಚ್ಛಿಸಿದೆ ಹಾಗೂ ಇದನ್ನು ಗಮನಿಸಲಾಗುತ್ತದೆ.

ಅವರ ಸಂದೇಶ ಮತ್ತು ಅವರು ಕರೆ ನೀಡಿದ ವಿಷಯ, ಮತ್ತು ಅವರ ಪ್ರವಾದಿತ್ವದ ಚಿಹ್ನೆಗಳು, ಮತ್ತು ಅವರ ಧರ್ಮ ಮತ್ತು ಅವರೊಂದಿಗಿದ್ದ ಅವರ ವಿರೋಧಿಗಳ ಅಭಿಪ್ರಾಯವನ್ನು ವಿವರಿಸುವೆನು.

## 1. ಅವರ ಹೆಸರು, ಅವರ ವಂಶ ಮತ್ತು ಅವರು ಹುಟ್ಟಿ ಬೆಳೆದ ಊರು

ಇಸ್ಲಾಮಿನ ಸಂದೇಶವಾಹಕರು ಇಸ್ಮಾಯೀಲ್ ಬಿನ್ ಇಬ್ರಾಹೀಮರ ವಂಶಸ್ಥರಾದ ಮುಹಮ್ಮದ್ ಬಿನ್ ಅಬ್ದುಲ್ಲಾ ಬಿನ್ ಅಬ್ದುಲ್ ಮುತ್ತಲಿಬ್ ಬಿನ್ ಹಾಶಿಮ್‌ರವರಾಗಿದ್ದಾರೆ

ಅಲ್ಲಾಹನ ಸಂದೇಶವಾಹಕರಾದ ಇಬ್ರಾಹೀಮ್ (ﷺ) ಸಿರಿಯಾದಿಂದ ಮಕ್ಕಾಗೆ ಬಂದರು. ಆಗ ಅವರ ಜೊತೆ ಅವರ ಪತ್ನಿ "ಹಾಜರ" ಹಾಗೂ ಅವರ ಮಗ ಇಸ್ಮಾಯೀಲ್ ಅವರ ಜೊತೆಗಿದ್ದರು. ಇಸ್ಮಾಯೀಲ್

(ﷺ) ಇನ್ನೂ ಚಿಕ್ಕ ಮಗುವಾಗಿದ್ದು ತಾಯಿಯ ಮಡಿಲಲ್ಲೇ ಬೆಳೆಯುತ್ತಿದ್ದರು. ಇಬ್ರಾಹೀಮ್ (ﷺ) ರು ಅವರಿಬ್ಬರ-ನ್ನು ಅಲ್ಲಾಹನ ಆಜ್ಞೆಯ ಮೇರೆಗೆ ಮಕ್ಕಾದಲ್ಲಿ ವಾಸ ಮಾಡಿಸಿದರು. ತರುವಾಯ ಆ ಬಾಲಕನು ಪ್ರಾಯಕ್ಕೆ ತಲುಪಿದಾಗ ಇಬ್ರಾಹೀಮ್ (ﷺ) ರು ಮಕ್ಕಾಗೆ ಮರಳಿ ಬಂದರು. ಅವರು ಹಾಗೂ ಅವರ ಮಗ ಇಸ್ಮಾಯೀಲ್ (ﷺ) ರು ಒಟ್ಟುಗೂಡಿ ಕಅಬಾ ಭವನವನ್ನು ನಿರ್ಮಿಸಿದರು. ಕಅಬಾದ ಸುತ್ತಮುತ್ತಲೂ ಜನರು ಹೆಚ್ಚಾದರು. ಮಕ್ಕಾ ಪಟ್ಟಣವು ಸರ್ವಲೋಕಗಳ ಪರಿಪಾಲಕ ಅಲ್ಲಾಹನ ಆರಾಧಕರ ಹಾಗೂ ಹಜ್ಜ್ ಕಾರ್ಯವನ್ನು ನಿರ್ವಹಿಸಲು ಬಯಸುವವರ ತಾಣವಾಯಿತು. ಜನರು ಅಲ್ಲಾಹನ ಆರಾಧನೆ ಹಾಗೂ ಅವನ ಏಕೈಕತೆಯ ನಂಬಿಕೆಯಲ್ಲಿ ಶತಮಾನಗಳವರೆಗೆ ಇಬ್ರಾಹೀಮ್ (ﷺ) ರ ಮಾರ್ಗದಲ್ಲಿ ನಡೆದರು.

ತದನಂತರ ಜನರು ಋಜುಮಾರ್ಗವನ್ನು ತಪ್ಪಿ ನಡೆಯಲು

ಪ್ರಾರಂಭಿಸಿದರು. ಅರೇಬಿಯಾದ ಅವಸ್ಥೆಯು ಅದರ ಸುತ್ತಮುತ್ತಲಿರುವ ಜಗತ್ತಿನ ಎಲ್ಲಾ ನಾಡುಗಳಂತೆ ಆಗತೊಡಗಿತು. ಅಲ್ಲಿ ಬಹುದೇವಾರಾಧನೆಯ ಕಾರ್ಯಗಳು, ಉದಾಹರಣೆಗೆ: ಮೂರ್ತಿಪೂಜೆ, ಹೆಣ್ಣು-ಮಕ್ಕಳನ್ನು ಜೀವಂತ ಹೂಳುವುದು, ಸ್ತ್ರೀಯರ ಮೇಲೆ ದೌರ್ಜನ್ಯ, ಸುಳ್ಳು, ಮದ್ಯಪಾನ ಮಾಡುವುದು, ಅನೈತಿಕ ಕೃತ್ಯಗಳನ್ನೆಸಗುವುದು, ಅನಾಥರ ಹಣವನ್ನು ದೋಚಿ ತಿನ್ನುವುದು, ಬಡ್ಡಿ ತಿನ್ನುವುದು ಇತ್ಯಾದಿ ಬಹಿರಂಗವಾಗಿ ನಡೆಯುತ್ತಿತ್ತು.

ಇಂತಹ ಸ್ಥಳದಲ್ಲಿ ಹಾಗೂ ಇಂತಹ ವಾತಾವರಣದ-ಲ್ಲಿ ಇಸ್ಲಾಮಿನ ಪ್ರವಾದಿ ಮುಹಮ್ಮದ್ ಇಬ್ನು ಅಬ್ದುಲ್ಲಾ (ﷺ) ಇಸ್ಮಾಯೀಲ್ ಇಬ್ನು ಇಬ್ರಾಹೀಮ್ (﵇) ರವರ ಸಂತಾನದಲ್ಲಿ ಕ್ರಿ.ಶ. 571 ರಲ್ಲಿ ಜನಿಸಿದರು.

ಅವರ ಜನನದ ಮುಂಚೆಯೇ ಅವರ ತಂದೆ

ತೀರಿಕೊಂಡರು. ಅವರು ಆರು ವರ್ಷದವರಾಗಿದ್ದಾಗ ಅವರ ತಾಯಿಯೂ ಸಹ ನಿಧನರಾದರು. ಅವರ ಚಿಕ್ಕಪ್ಪ ಅಬೂ ತಾಲಿಬರು ಅವರ ರಕ್ಷಣೆಯ ಹೊಣೆ ವಹಿಸಿಕೊಂಡರು. ಅವರು ಅನಾಥ ಹಾಗೂ ಬಡವರಾಗಿ ಈ ಭೂಮಿಯಲ್ಲಿ ಜೀವಿಸಿದರು. ಅವರು ತಮ್ಮ ಸ್ವಂತ ದುಡಿಮೆಯ ಸಂಪಾದನೆಯಿಂದ ತಿನ್ನುತ್ತಿದ್ದರು.

## 2. ಭಾಗ್ಯಶಾಲಿ ಮಹಿಳೆಯಿಂದ ಭಾಗ್ಯವಂತ ಮದುವೆ

ಅವರು ತಮ್ಮ 25ನೇ ವಯಸ್ಸಿನಲ್ಲಿದ್ದಾಗ ಮಕ್ಕಾದ ಸ್ತ್ರೀಯರಲ್ಲಿ ಸಭ್ಯ ಸ್ತ್ರೀಯಾದ "ಖದೀಜಾ ಬಿಂತು ಖುವೈಲಿದ್" (ﷺ) ರವರನ್ನು ವಿವಾಹವಾದರು ಮತ್ತು ಅವರಿಂದ ಅಲ್ಲಾಹನು ನಾಲ್ಕು ಹೆಣ್ಣು ಹಾಗೂ ಎರಡು ಗಂಡು ಮಕ್ಕಳನ್ನು ದಯಪಾಲಿಸಿದನು. ಆದರೆ ಅವರ ಗಂಡು ಮಕ್ಕಳು ತಮ್ಮ ಬಾಲ್ಯದಲ್ಲಿಯೇ ನಿಧನರಾದರು.

ಅವರ ಪತ್ನಿ ಮತ್ತು ಅವರ ಕುಟುಂಬದೊಂದಿಗೆ ಅವರ ವ್ಯವಹಾರವು ಅತ್ಯಂತ ಪ್ರೀತಿ ಮತ್ತು ದಯೆಯಿಂದ ಕೂಡಿತ್ತು. ಆದುದರಿಂದ ಅವರ ಪತ್ನಿ ಖದೀಜಾ ಅವರನ್ನು ಅತಿ ಹೆಚ್ಚು ಪ್ರೀತಿಸುತ್ತಿದ್ದರು. ಈ ಪ್ರೀತಿಗೆ ಬದಲಾಗಿ ಅವರೂ ಸಹ ಖದೀಜಾರಿಗೆ ಇನ್ನು ಹೆಚ್ಚು ಪ್ರೀತಿಯನ್ನು ನೀಡಿದರು. ಅವರ ಮರಣಾನಂತರವೂ ಹಲವಾರು ವರ್ಷಗಳ ಕಾಲ ಅವರನ್ನು ಮರೆಯಲಿಲ್ಲ. ಅವರು ಖದೀಜಾ (ﷺ) ರವರ ಸ್ನೇಹಿತೆಯರ ಮೇಲಿರುವ ಗೌರವದಿಂದಾಗಿ, ಖದೀಜಾರೊಂದಿಗೆ ಉತ್ತಮ ರೀತಿಯಿಂದ ವರ್ತಿಸು-ವುದಕ್ಕಾಗಿ ಹಾಗೂ ಅವರೊಂದಿಗಿದ್ದ ಪ್ರೀತಿಯನ್ನು ಉಳಿಸಿಕೊಳ್ಳುವ ಸಲುವಾಗಿ ಅವರು ಕುರಿಯನ್ನು ಬಲಿಯರ್ಪಿಸಿ ಅವರ (ಖದೀಜಾರ) ಸ್ನೇಹಿತೆಯರ ನಡುವೆ ಅದನ್ನು ಹಂಚುತ್ತಿದ್ದರು.

# 3. ದಿವ್ಯವಾಣಿಯ ಆರಂಭ

ಪ್ರವಾದಿ ಮುಹಮ್ಮದ್ (ﷺ) ರವರು ತಮ್ಮ ಹುಟ್ಟಿನಿಂದಲೇ ಸರ್ವಶ್ರೇಷ್ಠ ಸ್ವಭಾವದವರಾಗಿದ್ದರು ಮತ್ತು ಅವರ ಸಮುದಾಯದವರು ಅವರನ್ನು ಸತ್ಯವಂತ ಹಾಗೂ ಪ್ರಾಮಾಣಿಕ ಎಂದು ಕರೆಯುತ್ತಿದ್ದರು. ಅವರು ಅವರೊಂದಿಗೆ ಅತಿ ದೊಡ್ಡ ದೊಡ್ಡ ಕೆಲಸಗಳಲ್ಲಿ ಭಾಗ-ವಹಿಸುತ್ತಿದ್ದರು ಮತ್ತು ಅವರು ಮಾಡುತ್ತಿದ್ದ ಬಹು ದೇವಾರಾಧನೆಯ ಕಾರ್ಯಗಳನ್ನು ದ್ವೇಷಿಸುತ್ತಿ-ದ್ದರು. ಅವರೊಂದಿಗೆ ಆ ಬಹುದೇವಾರಾಧನೆಯ ಕಾರ್ಯಗಳಲ್ಲಿ ಭಾಗವಹಿಸುತ್ತಿರಲಿಲ್ಲ.

ಅವರು ತಮ್ಮ ವಯಸ್ಸಿನ ನಲವತ್ತನೇ ವರ್ಷಕ್ಕೆ ತಲುಪಿದಾಗ ಅಲ್ಲಾಹನು ಅವರನ್ನು ತನ್ನ ಸಂದೇಶವಾ-ಹಕನನ್ನಾಗಿ ನೇಮಕ ಮಾಡಿಕೊಂಡನು. ಆಗ ದೇವದೂತ ಜಿಬ್ರೀಲ್ (عليه السلام) ಕುರ್ಆನಿನಲ್ಲಿ ಅವತೀರ್ಣಗೊಂಡ

ಮೊಟ್ಟಮೊದಲ ಅಧ್ಯಾಯದೊಂದಿಗೆ ಅವರ ಬಳಿಗೆ ಬಂದರು. ಅದು ಅಲ್ಲಾಹನ ಈ ವಚನಗಳಾಗಿವೆ:

﴿ٱقْرَأْ بِٱسْمِ رَبِّكَ ٱلَّذِى خَلَقَ ﴿١﴾ خَلَقَ ٱلْإِنسَـٰنَ
مِنْ عَلَقٍ ﴿٢﴾ ٱقْرَأْ وَرَبُّكَ ٱلْأَكْرَمُ ﴿٣﴾ ٱلَّذِى عَلَّمَ
بِٱلْقَلَمِ ﴿٤﴾ عَلَّمَ ٱلْإِنسَـٰنَ مَا لَمْ يَعْلَمْ ﴿٥﴾﴾

[1] (ಸಂದೇಶವಾಹಕರೇ) ನಿಮ್ಮನ್ನು ಸೃಷ್ಟಿಸಿದ ನಿಮ್ಮ ಪ್ರಭುವಿನ ನಾಮದೊಂದಿಗೆ ಓದಿರಿ.

[2] ಅವನು ಹೆಪ್ಪುಗಟ್ಟಿದ ರಕ್ತದ ಒಂದು ಪಿಂಡದಿಂದ ಮಾನವನನ್ನು ಸೃಷ್ಟಿಸಿದನು.

[3] ಓದಿರಿ, ಮತ್ತು ನಿಮ್ಮ ಪ್ರಭು ಅತ್ಯಧಿಕ ಔದಾರ್ಯ ಉಳ್ಳವನು.

[4] ಅವನು ಲೇಖನಿಯ ಮೂಲಕ ವಿದ್ಯೆ ಕಲಿಸಿಕೊಟ್ಟನು.

[5] ಮನುಷ್ಯನಿಗೆ ಅರಿವಿಲ್ಲದಿರುವುದನ್ನು ಅವನು ಕಲಿ-ಸಿಕೊಟ್ಟಿರುವನು. [ಅಧ್ಯಾಯ ಅಲ್ ಅಲಖ್ : 1-5]

ಪ್ರವಾದಿ (ﷺ) ರು ತಮ್ಮ ಪತ್ನಿ ಖದೀಜಾ (رضي الله عنها) ರವರ ಬಳಿ ಬಂದರು. ಅವರ ಹೃದಯವು ಕಂಪಿಸುತ್ತಿತ್ತು. ಪ್ರವಾದಿ(ﷺ) ರವರು ನಡೆದ ಘಟನೆಯ ಬಗ್ಗೆ ಅವರಿಗೆ ತಿಳಿಸಿದರು. ಆಗ ಅವರು ಪ್ರವಾದಿ(ﷺ) ರವರನ್ನು ಶಾಂತಗೊಳಿಸಿದರು ಮತ್ತು ತಮ್ಮ ಚಿಕ್ಕಪ್ಪನ ಮಗನಾದ ವರ್ಖಾ ಬಿನ್ ನೌಫಲರ ಬಳಿ ಕರೆದುಕೊಂಡು ಹೋದರು. —ಅವರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂ-ತರಗೊಂಡಿದ್ದರು ಹಾಗೂ ಇಂಜೀಲ್ ಮತ್ತು ತೌರಾತನ್ನು ಓದಿದ್ದರು— ಖದೀಜಾ ರವರು ಅವರಿಗೆ ಹೇಳಿದರು: ಚಿಕ್ಕಪ್ಪನ ಮಗನೇ! ನಿನ್ನ ತಮ್ಮನ ಮಗ ಹೇಳುತ್ತಿರುವು-ದನ್ನು ಕೇಳು. ಆಗ ವರ್ಖಾ ಅವರಿಗೆ ಹೇಳಿದರು. ಓ

ನನ್ನ ತಮ್ಮನ ಮಗನೇ! ನೀವೇನನ್ನು ನೋಡಿದ್ದೀರಾ? ಆಗ ಪ್ರವಾದಿ (ﷺ) ರು ತಾವು ನೋಡಿದ್ದನ್ನು ಅವರಿಗೆ ಹೇಳಿದರು.

"ಇವರು ಮೂಸಾ (ﷺ) ರ ಬಳಿಗೆ ಬಂದ ಅಲ್ಲಾಹನ ಅದೇ ದೂತರಾಗಿದ್ದಾರೆ. ನಿಮ್ಮ ಜನಾಂಗದವರು ನಿಮ್ಮನ್ನು ನಿಮ್ಮ ಊರಿಂದ ಹೊರಗಟ್ಟುವ ಸಮಯದಲ್ಲಿ ನಾನು ಜೀವಂತವಿರುತ್ತಿದ್ದರೆ!" ಅವರ ಮಾತಿನಿಂದ ಕಳವಳಗೊಂಡ ಪ್ರವಾದಿ (ﷺ) ರವರು ಕೇಳುತ್ತಾರೆ, "ಏನು ನನ್ನ ಜನರು ನನ್ನನ್ನು ಊರಿಂದ ಹೊರಗಟ್ಟುವುದೇ...?" ವರಖ ಹೇಳಿದರು: "ಹೌದು, ಎಂದೆಲ್ಲಾ ಈ ರೀತಿಯ ದೇವ ಸಂದೇಶದೊಂದಿಗೆ ಜನರು ಆಗಮಿಸಿದ್ದರೋ.... ಅವರೆಲ್ಲರೊಂದಿಗೆ ಅವರ ಸಮುದಾಯ ಇದೇ ರೀತಿ ವರ್ತಿಸಿತ್ತು. ಒಂದು ವೇಳೆ ನಿಮ್ಮೊಂದಿಗೆ ನಿಮ್ಮ ಜನಾಂಗ ಮಿತಿಮೀರಿ ವರ್ತಿಸುವ ದಿನಗಳಲ್ಲಿ ನಾನು ಜೀವಂತವಿದ್ದರೆ ನಿಮಗೆ ಉಪಯುಕ್ತ ಸಹಾಯ ಮಾಡುವೆ" ಎಂದು ವರಕ

ಪ್ರವಾದಿ (ﷺ) ರೊಂದಿಗೆ ಹೇಳಿದರು.[2]

ಮಕ್ಕಾದಲ್ಲಿ ಕುರ್‌ಆನ್ ಸತತವಾಗಿ ಅವತೀರ್ಣಗೊಳ್ಳುತ್ತಿತ್ತು. ಪ್ರವಾದಿ (ﷺ) ರ ಬಳಿ ಸಂದೇಶವಾಹಕತ್ವದ ವಿವರಣೆಗಳನ್ನು ತಂದಂತೆ ಜಿಬ್ರೀಲ್ (عليه السلام) ರು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನ ಬಳಿಯಿಂದ ಕುರ್‌ಆನ್ ತರುತ್ತಿದ್ದರು.

ಪ್ರವಾದಿ (ﷺ) ರು ತನ್ನ ಸಮುದಾಯದವರನ್ನು ಇಸ್ಲಾಮಿನೆಡೆಗೆ ಆಹ್ವಾನಿಸಲು ಪ್ರಾರಂಭಿಸಿದರು. ಅವರ ಸಮುದಾಯದವರು ಅವರನ್ನು ವಿರೋಧಿಸಿದರು ಹಾಗೂ ಅವರೊಂದಿಗೆ ಜಗಳವಾಡಿದರು. ಸಂದೇಶವಾಹಕತ್ವವನ್ನು ತೊರೆಯಬೇಕೆಂದು ಹಣ, ಸಂಪತ್ತು ಮತ್ತು ಆಸ್ತಿಯನ್ನು ಅವರ ಮುಂದಿಟ್ಟರು. ಅದೆಲ್ಲವನ್ನೂ

2 ಮುತ್ತಫಖುನ್ ಅಲೈಹ್ ಆಯಿಶಾ (رضي الله عنها) ರವರ ಹದೀಸ್, ಸಹೀಹ್ ಬುಖಾರಿ 7/1(2) ಮತ್ತು ಸಹೀಹ್ ಮುಸ್ಲಿಮ್ 139/1(152).

ಪ್ರವಾದಿ(ﷺ) ರು ನಿರಾಕರಿಸಿದರು. ಗತಕಾಲದ ಸಂದೇಶವಾಹಕರಿಗೆ ಅವರ ಸಮುದಾಯದ ಮುಖಂಡರು ಹೇಳಿದಂತೆ ಪ್ರವಾದಿ(ﷺ) ರಿಗೂ ಅವರ ಸಮುದಾಯದ ಮುಖಂಡರು ಮಾಟಗಾರ, ಮಿಥ್ಯವಾದಿ, (ಕುರ್‌ಆನನ್ನು) ಸ್ವರಚನೆ ಮಾಡಿಕೊಂಡವನೆಂದು ಹೇಳಿದರು. ಅವರ ಜೀವನವನ್ನು ಸಂಕುಚಿತಗೊಳಿಸಿದರು, ಅವರ ಪವಿತ್ರ ದೇಹದ ಮೇಲೆ ಅತಿಕ್ರಮವೆಸಗಿದರು ಹಾಗೂ ಅವರ ಅನುಯಾಯಿಗಳಿಗೆ ಬಹಳ ಕಿರುಕುಳಗಳನ್ನು ಕೊಟ್ಟರು.

ಪ್ರವಾದಿ (ﷺ) ರವರು ಮಕ್ಕಾದಲ್ಲಿ ಜನರನ್ನು ಅಲ್ಲಾಹನೆಡೆಗೆ ಕರೆಯುತ್ತಿದ್ದರು. ಅವರು ಹಜ್ಜ್‌ನ ಕಾಲದಲ್ಲಿ ಹಾಗೂ ಅರಬರ ಸಂತೆಗಳ ಸಂದರ್ಭಗಳಲ್ಲಿ ಜನರನ್ನು ಭೇಟಿಯಾಗುತ್ತಿದ್ದರು. ಅವರಿಗೆ ಪ್ರಪಂಚ ಮತ್ತು ಅಧಿಕಾರದ ಆಸೆಯನ್ನು ನೀಡಿ ಪ್ರೇರೇಪಿಸದೆ ಹಾಗೂ ಖಡ್ಗದ ಭಯವನ್ನು ನೀಡಿ ಭಯಭೀತರಾಗಿ ಮಾಡದೆ ಇಸ್ಲಾಮಿನ ನೈಜ ಸಂದೇಶವನ್ನು ಅವರ ಮುಂದೆ

ಪ್ರಸ್ತಾಪಿಸುತ್ತಿದ್ದರು. ಅವರ ಬಳಿ ಯಾವ ಸಂಪತ್ತು ಹಾಗೂ ಯಾವ ಅಧಿಕಾರವೂ ಇರಲಿಲ್ಲ.

ಪ್ರವಾದಿ (ﷺ) ರವರು ತಮ್ಮ ಮೊದಲನೇ ಆಹ್ವಾನದಲ್ಲೇ ವಿರೋಧಿಗಳನ್ನು ಮಹತ್ತರವಾದ ಕುರ್‌ಆನಿನಂತ ಗ್ರಂಥ ತರುವ ಸವಾಲನ್ನು ಹಾಕಿದರು ಮತ್ತು ವಿರೋಧಿಗಳೊಂದಿಗೆ ಕುರ್‌ಆನಿನ ಮೂಲಕ ಹೋರಾಟ ಮಾಡಲು ಪ್ರಾರಂಭಿಸಿದರು, ಮತ್ತು ಬಹಳಷ್ಟು ಸಹಾಬಾಗಳು ಅವರ ಮೇಲೆ ವಿಶ್ವಾಸ ತಂದರು.

ಅಲ್ಲಾಹನು ಪ್ರವಾದಿ (ﷺ) ರವರಿಗೆ ಮಕ್ಕಾದಲ್ಲಿ ಅತ್ಯಂತ ದೊಡ್ಡ ದೃಷ್ಟಾಂತದೊಂದಿಗೆ ಗೌರವಿಸಿದನು. ಅದುವೇ ಇಸ್ರಾ ಮತ್ತು ಮೆಅರಾಜ್. ಅರ್ಥಾತ್ ಒಂದೇ ರಾತ್ರಿಯಲ್ಲಿ ಮಸ್ಜಿದುಲ್ ಹರಾಮ್ ನಿಂದ ಮಸ್ಜಿದುಲ್ ಅಕ್ಸಾವರೆಗೆ ಮತ್ತೆ ಅಲ್ಲಿಂದ ಏಳು ಆಕಾಶದವರೆಗಿನ ಪ್ರಯಾಣ. ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರ ಬಳಿ

ಉಲ್ಲೇಖಿಸಿರುವಂತೆ ಹಾಗೂ ಇದು ತಿಳಿದಿರುವಂತಹ ವಿಷಯವೂ ಆಗಿದೆ. ಅಲ್ಲಾಹನು ಪೈಗಂಬರ್ ಇಲಿಯಾಸ್ (ﷺ) ಮತ್ತು ಈಸಾ (ﷺ) ರವರನ್ನು ತನ್ನ ಬಳಿ ಎತ್ತಿ ಕೊಂಡನು.

ಪ್ರವಾದಿ (ﷺ) ರವರು ಆಕಾಶದಲ್ಲಿ ಅಲ್ಲಾಹನ ಬಳಿ ನಮಾಝ್ ನಿರ್ವಹಿಸುವ ಆದೇಶವನ್ನು ಪಡೆದರು. ಅದುವೇ ಹಗಲಿರುಳಿನಲ್ಲಿ ಮುಸ್ಲಿಮರು ನಿರ್ವಹಿಸುವ ಐದು ಹೊತ್ತಿನ ನಮಾಝ್‌ಗಳಾಗಿವೆ. ಅದೇ ರೀತಿ ಮಕ್ಕಾದಲ್ಲೂ ಒಂದು ದೊಡ್ಡ ದೃಷ್ಟಾಂತ ಸಂಭವಿಸಿತು. ಅದೇನೆಂದರೆ ಚಂದ್ರವು ಎರಡು ಹೋಳಾಯಿತು. ಸತ್ಯನಿ-ಷೇಧಿಗಳೂ ಸಹ ಅದನ್ನು ತಮ್ಮ ಕಣ್ಣಿನಿಂದ ನೋಡಿದರು.

ಖುರೈಷಿ ಸತ್ಯನಿಷೇಧಿಗಳು ಪ್ರವಾದಿ (ﷺ) ರವರನ್ನು ಸತ್ಯ ಸಂದೇಶದ ಪ್ರಚಾರದಿಂದ ತಡೆಯಲು ಮತ್ತು ಅವರ ವಿರುದ್ಧ ತಂತ್ರ ಹೂಡಲು ಮತ್ತು ಅವರಿಂದ ಜನರನ್ನು

ವಿಮುಖಗೊಳಿಸಲು ಎಲ್ಲಾ ರೀತಿಯ ವಿಧಾನಗಳನ್ನು ಬಳಸಿದರು. ದೃಷ್ಟಾಂತಗಳನ್ನು ಕೇಳುತ್ತಾ ಅವರನ್ನು ಬಹಳ ಕಷ್ಟದಲ್ಲಿ ಸಿಲುಕಿಸಿದರು. ಅವರು ಪ್ರವಾದಿಯ-ವರೂಂದಿಗೆ ವಾದಿಸಲು ಹಾಗೂ ಜನರನ್ನು ಅವರಿಂದ ವಿಮುಖಗೊಳಿಸಲು ಅವರಿಗೆ ಸಹಾಯ ನೀಡುವ ಪುರಾವೆಗಳನ್ನು ಯಹೂದರಿಂದ ಕೋರಿದರು.

ಸತ್ಯವಿಶ್ವಾಸಿಗಳಿಗೆ ಖುರೈಷ್ ಗೋತ್ರದ ಸತ್ಯನಿಷೇಧಿಗಳ ಕಿರುಕುಳದ ಸುದ್ದಿ ಪ್ರವಾದಿ (ﷺ) ರವರಿಗೆ ತಲುಪಿದಾಗ ಪ್ರವಾದಿ(ﷺ) ರವರು ಸತ್ಯವಿಶ್ವಾಸಿಗಳಿಗೆ ಹಬ್ಷಾ ಗೆ ವಲಸೆ ಹೋಗುವ ಆದೇಶ ನೀಡಿದರು. ಪ್ರವಾದಿ(ﷺ) ರವರು ತಮ್ಮ ಸಹಚರರಿಗೆ: ಅಲ್ಲಿ ಒಬ್ಬ ನ್ಯಾಯವಾದಿ ರಾಜನಿದ್ದಾನೆ. ಅವನ ಬಳಿ ಯಾರ ಮೇಲೂ ಅನ್ಯಾ-ಯವಾಗುವುದಿಲ್ಲ. ಅವನೊಬ್ಬ ಕ್ರಿಶ್ಚಿಯನ್ ರಾಜನಾ-ಗಿದ್ದಾನೆಂದು ಹೇಳಿದರು. ಹೀಗೆ ಸಹಾಬಗಳು ಎರಡು ಪಂಗಡಗಳಾಗಿ ಹಬ್ಷಾ ಗೆ ವಲಸೆ ಹೋದರು. ವಲಸಿಗರು

ಹಬ್ಶಾಗೆ ತಲುಪಿದಾಗ ಪ್ರವಾದಿ (ﷺ) ರವರು ತಂದ ಇಸ್ಲಾಮ್ ಧರ್ಮವನ್ನು ನಜ್ಜಾಶಿ ರಾಜನಿಗೆ ಪ್ರಸ್ತಾಪಿ-ಸಿದರು. ಅವನು ಇಸ್ಲಾಂ ಧರ್ಮ ಸ್ವೀಕರಿಸಿದನು ಮತ್ತು ಹೇಳತೊಡಗಿದನು, "ಅಲ್ಲಾಹನಾಣೆ ಈ ಧರ್ಮ ಮತ್ತು ಮೂಸಾ (عليه السلام) ರವರು ತಂದ ಧರ್ಮವೂ ಒಂದೇ ಮಾಡ (ಗೋಡೆಯಲ್ಲಿ ದೀಪವನ್ನಿಡಲು ನಿರ್ಮಿಸಲಾದ ಗೂಡು) ದಿಂದ ಬಂದದ್ದಾಗಿದೆ. ಅವರ ಸಮುದಾಯದವರು ಅವರಿಗೆ ಹಾಗೂ ಅವರ ಅನುಯಾಯಿಗಳಿಗೆ ಬಹಳ ತೊಂದರೆಗಳನ್ನು ಕೊಟ್ಟರು.

ಮಕ್ಕಾದ ಸಂತೆಯ ಸಂದರ್ಭದಲ್ಲಿ ಪ್ರವಾದಿ (ﷺ) ರವರ ಮೇಲೆ ವಿಶ್ವಾಸ ತಂದವರು ಮದೀನಾದಿಂದ ಬಂದಿದ್ದರು. ಪ್ರವಾದಿ (ﷺ) ರವರು ಮದೀನಾಕ್ಕೆ (ಅದನ್ನು ಯಸ್ರಿಬ್ ಎಂದು ಹೇಳಲಾಗುತ್ತಿತ್ತು) ವಲಸೆ ಹೋದರೆ ಇಸ್ಲಾಂ ಸ್ವೀಕರಿಸುವೆವು ಹಾಗೂ ಪ್ರವಾದಿಯವರಿಗೆ ಸಹಾಯ ಮಾಡುವೆವು ಎಂದು ಪ್ರವಾದಿಯವರೊಂದಿಗೆ ಪ್ರತಿಜ್ಞೆ

ಮಾಡಿದರು. ಮಕ್ಕಾದಲ್ಲಿ ಉಳಿದಿರುವವರಿಗೆ ಪ್ರವಾ-ದಿಯವರು(ﷺ) ಮದೀನಾದ ಕಡೆ ವಲಸೆ ಹೋಗಲು ಅನುಮತಿ ನೀಡಿದರು. ಅವರೆಲ್ಲರೂ ಮದೀನಾಕ್ಕೆ ವಲಸೆ ಹೋದರು. ಮದೀನಾದಲ್ಲಿ ಇಸ್ಲಾಂ ಹರಡಿತು. ಎಲ್ಲಿಯ-ವರೆಗೆಂದರೆ ಮದೀನಾದ ಪ್ರತಿಯೊಂದು ಮನೆಯಲ್ಲಿ ಇಸ್ಲಾಂ ಧರ್ಮವು ಪ್ರವೇಶಿಸಿತು.

ಪ್ರವಾದಿ (ﷺ) ರವರು ಮಕ್ಕಾದಲ್ಲಿ ಹದಿಮೂರು ವರ್ಷಗಳ ಕಾಲ ಅಲ್ಲಾಹನೆಡೆಗೆ ಆಹ್ವಾನಿಸುತ್ತಾ ಕಳೆದ ನಂತರ ಅಲ್ಲಾಹನು ಮದೀನಾದೆಡೆಗೆ ವಲಸೆ ಹೋಗಲು ಅನುಮತಿ ನೀಡಿದನು. ಆಗ ಪ್ರವಾದಿ (ﷺ) ರವರು ವಲಸೆ ಹೋದರು ಹಾಗೂ ಜನರನ್ನು ಅಲ್ಲಾಹನ ಕಡೆಗೆ ಆಹ್ವಾ-ನಿಸುವುದನ್ನು ಮುಂದುವರಿಸಿದರು. ಅಲ್ಲಿ ಇಸ್ಲಾಮಿನ ಆದೇಶಗಳು ಕ್ರಮಬದ್ಧತೆಯಿಂದ ಹಂತಹಂತವಾಗಿ ಅವತೀರ್ಣವಾಗತೊಡಗಿದವು. ಪ್ರವಾದಿಯವರು (ﷺ) ರೋಮನ್, ಪರ್ಶಿಯ ಹಾಗೂ ಈಜಿಪ್ಟಿನ ದೊರೆಗಳ ಬಳಿ

ಇಸ್ಲಾಮಿನ ಸಂದೇಶವನ್ನು ರವಾನಿಸಿದರು.

ಮದೀನಾದಲ್ಲಿ ಸೂರ್ಯಗ್ರಹಣದ ಘಟನೆಯು ಸಂಭವಿಸಿತು. ಜನರು ಭಯಭೀತರಾದರು. ಅನಿರೀಕ್ಷಿ-ತವಾಗಿ ಅದೇ ದಿನದಂದು ಪ್ರವಾದಿ (ﷺ) ರವರ ಮಗ ಇಬ್ರಾಹೀಮ್ ನಿಧನರಾಗಿದ್ದರು. ಜನರು ಇಬ್ರಾಹೀಮರ ಮರಣದಿಂದಾಗಿ ಸೂರ್ಯಗ್ರಹಣ ಸಂಭವಿಸಿತೆಂದು ಹೇಳಲಾರಂಭಿಸಿದರು. ಆಗ ಪ್ರವಾದಿ (ﷺ) ರವರು ಹೇಳಿದರು:

«إِنَّ الشَّمْسَ وَالْقَمَرَ آيَتَانِ مِنْ آيَاتِ اللهِ، يُخَوِّفُ اللهُ بِهِمَا عِبَادَهُ، وَإِنَّهُمَا لَا يَنْكَسِفَانِ لِمَوْتِ أَحَدٍ مِنَ النَّاسِ»

"ಯಾರೊಬ್ಬರ ಸಾವು ಅಥವಾ ಬದುಕಿನಿಂದ ಸೂರ್ಯ

ಮತ್ತು ಚಂದ್ರ ಗ್ರಹಣವಾಗುವುದಿಲ್ಲ. ಬದಲಾಗಿ ಅವೆರಡು ಅಲ್ಲಾಹನ ದೃಷ್ಟಾಂತಗಳಾಗಿವೆ. ಅಲ್ಲಾಹನು ಅವುಗಳಿಂದ ತನ್ನ ದಾಸರನ್ನು ಭಯಪಡಿಸುತ್ತಿರುವನು.[3]

ಒಂದು ವೇಳೆ ಪ್ರವಾದಿ (ﷺ) ರವರು ಸುಳ್ಳು ಹೇಳು-ವವರಾಗಿರುತ್ತಿದ್ದರೆ ಜನರಲ್ಲಿ ತನ್ನನ್ನು ಸುಳ್ಳಾಗಿಸುವವ-ರಿಗೆ (ಈ ಘಟನೆಯ ಮೂಲಕ) ಬೆದರಿಸಲು ಅವಸರ ಪಡುತ್ತಿದ್ದರು, ಹಾಗೂ ನನ್ನ ಮಗನ ಮರಣದಿಂದ ಸೂರ್ಯಗ್ರಹಣವಾಗಬಹುದಾದರೆ ನನ್ನನ್ನು ನಿಷೇಧಿ-ಸುವವರೊಂದಿಗೆ ಏನಾಗಬಹುದೆಂದು ಹೇಳುತ್ತಿದ್ದರು.

ಅಲ್ಲಾಹನು ಪ್ರವಾದಿ (ﷺ) ರವರನ್ನು ಎಲ್ಲಾ ರೀತಿಯ ಸರ್ವಶ್ರೇಷ್ಠ ಸ್ವಭಾವಗಳಿಂದ ಸೌಂದರ್ಯಪಡಿಸಿದ್ದನು ಮತ್ತು ತನ್ನ ಗ್ರಂಥದಲ್ಲಿ ಅವರನ್ನು ಹೀಗೆ ವರ್ಣಿಸಿದನು:

3 ಸಹೀಹ್ ಮುಸ್ಲಿಂ (901)

﴿ وَإِنَّكَ لَعَلَىٰ خُلُقٍ عَظِيمٍ ٤ ﴾

"ಖಂಡಿತವಾಗಿಯೂ ತಾವು ಸರ್ವಶ್ರೇಷ್ಠ ಸ್ವಭಾವ ದಲ್ಲಿರುವಿರಿ." [ಸೂರ ಅಲ್ ಖಲಮ್:4]

ಪ್ರವಾದಿ (ﷺ) ರವರು ಸತ್ಯ, ಪ್ರಾಮಾಣಿಕತೆ, ಧೈರ್ಯ, ನ್ಯಾಯ, ನಿಷ್ಠೆ ಹಾಗೂ ಉದಾರತೆಗಳೆಂಬ ಪ್ರತಿಯೊಂದು ಉತ್ತಮ ಸ್ವಭಾವದಿಂದ ಕೂಡಿದ್ದರು. ಪ್ರವಾದಿ(ﷺ) ರವರು ಬಡವರಿಗೆ, ನಿರ್ಗತಿಕರಿಗೆ, ವಿಧವೆಯರಿಗೆ, ಹಾಗೂ ದಾರಿದ್ರ್ಯವು ಕಾಡುತ್ತಿರುವವರಿಗೆ ದಾನ-ಧರ್ಮ ಮಾಡುವುದನ್ನು ಬಹಳ ಪ್ರೀತಿಸುತ್ತಿದ್ದರು ಹಾಗೂ ಅವರ ನೇರ ಮಾರ್ಗದರ್ಶನಕ್ಕಾಗಿ ಅತ್ಯಾಸಕ್ತಿ ಉಳ್ಳವರಾಗಿದ್ದರು. ಅವರೊಂದಿಗೆ ಬಹಳ ಕರುಣೆ ತೋರುತ್ತಿದ್ದರು ಹಾಗೂ ಅವರೊಂದಿಗೆ ಬಹಳ ವಿನಮ್ರತೆಯಿಂದ ವರ್ತಿಸುತ್ತಿದ್ದರು. ಎಲ್ಲಿಯವರೆಗೆಂದರೆ ಒಬ್ಬ ಅಪರಿಚಿತ ವ್ಯಕ್ತಿ ಪ್ರವಾದಿ (ﷺ) ರವರನ್ನು ಹುಡುಕುತ್ತಾ ಪ್ರವಾದಿ(ﷺ) ರವರ

ಸಹಚರರನ್ನು ನಿಮ್ಮಲ್ಲಿ ಮುಹಮ್ಮದ್ ಯಾರು ಎಂದು ಕೇಳುತ್ತಿದ್ದನು. ಅವರು (ಪ್ರವಾದಿ) ಅವರ ಮಧ್ಯದಲ್ಲೇ ಇದ್ದರೂ ಸಹ ಅವರನ್ನು ಪರಿಚಯಿಸುತ್ತಿರಲಿಲ್ಲ.

ಅವರ ಜೀವನ ಚರಿತ್ರೆಯು ಶತ್ರುವಿಗೆ, ಮಿತ್ರನಿಗೆ, ಹತ್ತಿ-ರದವನಿಗೆ, ದೂರದವನಿಗೆ, ಚಿಕ್ಕವನಿಗೆ, ದೊಡ್ಡವನಿಗೆ ಸ್ತ್ರೀಯರಿಗೆ, ಪುರುಷರಿಗೆ, ಮೂಕ ಪ್ರಾಣಿ ಪಕ್ಷಿಗಳಿಗೆ ಅರ್ಥಾತ್ ಎಲ್ಲರ ಜೊತೆ ಅವರ ವ್ಯವಹಾರದಲ್ಲಿ ಸಮಗ್ರತೆ ಹಾಗೂ ಉದಾರತೆಯ ಒಂದು ದೊಡ್ಡ ಸಂಕೇತವಾಗಿತ್ತು.

ಅಲ್ಲಾಹು ಅವರಿಗೆ ಧರ್ಮವನ್ನು ಪೂರ್ತೀಕರಿಸಿಕೊಟ್ಟಾಗ ಪ್ರವಾದಿ (ﷺ) ರವರು ಅಲ್ಲಾಹನ ಸಂದೇಶವನ್ನು ಅದರ ತುತ್ತತುದಿಯವರೆಗೆ ತಲುಪಿಸಿದರು. ಪ್ರವಾದಿಯವರು ತಮ್ಮ ಜೀವನದ 63ನೇ ವಯಸ್ಸಿನಲ್ಲಿ ಈ ಭೂಲೋಕದಿಂದ ಅಗಲಿದರು. ಅದರಲ್ಲಿ 40 ವರ್ಷ ಪ್ರವಾದಿತ್ವಕ್ಕೆ ಮುಂಚೆ ಹಾಗೂ 23 ವರ್ಷ ಅಲ್ಲಾಹನ ಸಂದೇಶವಾಹಕರಾಗಿ

ಕಳೆದರು.

ಪ್ರವಾದಿ (ﷺ) ರವರನ್ನು ಮದೀನಾದಲ್ಲಿ ದಫನ ಮಾಡಲಾಯಿತು. ಪ್ರವಾದಿಯವರು ತಮ್ಮ ಮರಣದ ನಂತರ ತಾವು ಸವಾರಿ ಮಾಡುತ್ತಿದ್ದ ಒಂದು ಬಿಳಿ ಹೇಸರುಗತ್ತೆ ಹಾಗೂ ದಾರಿಹೋಕನಿಗೆ ದಾನವಾಗಿ ಬಿಟ್ಟುಕೊಟ್ಟ ಒಂದು ಭೂಮಿಯ ಹೊರತು ಯಾವುದೇ ಹಣ ಹಾಗೂ ಸಂಪತ್ತನ್ನು ವಾರೀಸು ಸೊತ್ತನಾಗಿ ಬಿಟ್ಟು ಹೋಗಲಿಲ್ಲ.[4]

ಪ್ರವಾದಿ(ﷺ) ರವರ ಮೇಲೆ ವಿಶ್ವಾಸವಿರಿಸಿದವರು ಮತ್ತು ಅವರನ್ನು ದೃಢೀಕರಿಸಿದವರು ಹಾಗೂ ಅವರನ್ನು ಅನು-ಸರಿಸಿದವರ ಸಂಖ್ಯೆ ಬಹಳಷ್ಟಿದೆ. ಅವರ ಸಹಚರರಲ್ಲಿ ಅವರ ಜೊತೆ ಅಂತಿಮ ಹಜ್ಜ್ ಯಾತ್ರೆ ನಿರ್ವಹಿಸಿದವರು ಒಂದು ಲಕ್ಷಕ್ಕಿಂತಲೂ ಮಿಗಿಲಾಗಿದ್ದಾರೆ. ಈ ಅಂತಿಮ

4 ಸಹೀಹ್ ಅಲ್ ಬುಖಾರಿ 6/15 (4461).

ಹಜ್ಜ್ ನಡೆದಿದ್ದು ಪ್ರವಾದಿಯವರ(ﷺ) ಮರಣಕ್ಕಿಂತ ಸುಮಾರು ಮೂರು ತಿಂಗಳ ಮುಂಚೆ. ಬಹುಶಃ ಇದು ಅವರ ಧರ್ಮದ ರಕ್ಷಣೆ ಹಾಗೂ ಹರಡುವಿಕೆಯ ರಹಸ್ಯಗಳಲ್ಲಿ ಒಂದಾಗಿದೆ. ಇಸ್ಲಾಮಿನ ಅಮೂಲ್ಯ ಶಿಕ್ಷಣ ಹಾಗೂ ಅದರ ತತ್ವಗಳ ಪ್ರಕಾರ ತರಬೇತಿ ನೀಡಿದ ಪ್ರವಾದಿಯವರ ಸಹಚರರು ನ್ಯಾಯ, ಭಯ-ಭಕ್ತಿ, ದೇವಭಯ, ಧರ್ಮನಿಷ್ಠೆಯ ವಿಷಯದಲ್ಲಿ, ಹಾಗೂ ತಾವು ವಿಶ್ವಾಸವಿರಿಸಿದ ಈ ಮಹತ್ತರವಾದ ಧರ್ಮಕ್ಕಾಗಿ ತ್ಯಾಗ ನೀಡುವ ಅತ್ಯುತ್ತಮ ಸಹಚರರಾಗಿದ್ದರು.

ಮತ್ತು ಅವರ ಸಹಚರರಲ್ಲಿ ವಿಶ್ವಾಸ, ಜ್ಞಾನ ಮತ್ತು ಸತ್ಕಾರ್ಯ, ನಿಷ್ಕಳಂಕತೆ, ದೃಢವಿಶ್ವಾಸ, ಧೈರ್ಯ, ತ್ಯಾಗ ಹಾಗೂ ಉದಾರತೆಯ ವಿಷಯದಲ್ಲಿ ಅತ್ಯುನ್ನತ ಪದವಿ-ಗೇರಿದವರು: ಅಬೂಬಕರ್ ಸಿದ್ದೀಕ್, ಉಮರ್ ಬಿನ್ ಖತ್ತಾಬ್, ಉಸ್ಮಾನ್ ಬಿನ್ ಅಫ್ಫಾನ್, ಅಲೀ ಬಿನ್ ಅಬೀ ತಾಲಿಬ್ (رضي الله عنهم) ರವರಾಗಿದ್ದಾರೆ. ಅವರು ಮೊಟ್ಟಮೊದಲಿಗೆ

ಸತ್ಯವಿಶ್ವಾಸವನ್ನು ಸ್ವೀಕರಿಸಿ ಅದನ್ನು ದೃಢೀಕರಿಸಿದವರಾಗಿದ್ದರು. ಅವರು ಪ್ರವಾದಿಯವರ(ﷺ) ನಂತರ ಇಸ್ಲಾಮಿನ ಬಾವುಟವನ್ನು ಎತ್ತಿ ಹಿಡಿಯುವ ಪ್ರವಾದಿಯವರ(ﷺ) ಉತ್ತರಾಧಿಕಾರಿಗಳಾಗಿದ್ದರು. ಅವರಿಗೆ ಪ್ರವಾದಿತ್ವದ ಯಾವ ವಿಶೇಷತೆಯೂ ಇರಲಿಲ್ಲ ಮತ್ತು ಪ್ರವಾದಿಯವರು ತಮ್ಮ ಇತರೆ ಸಹಚರರನ್ನು ಹೊರತುಪಡಿಸಿ ಅವರಿಗೆ ಯಾವುದೇ ವಿಷಯದಲ್ಲಿ ಪ್ರತ್ಯೇಕಿಸಲೂ ಇಲ್ಲ.

ಪ್ರವಾದಿಯವರು(ﷺ) ತಂದ ಪುಸ್ತಕ ಮತ್ತು ಅವರ ಚರ್ಯೆ, ಅವರ ಜೀವನ ಚರಿತ್ರೆ, ಅವರ ನುಡಿಗಳು, ಅವರ ಕಾರ್ಯಗಳು, ಅವರು ಮಾತನಾಡುತ್ತಿದ್ದ ಭಾಷೆ ಇದೆಲ್ಲವನ್ನು ಅಲ್ಲಾಹನು ಸಂರಕ್ಷಿಸಿ ಇಟ್ಟನು. ಪ್ರವಾದಿಯವರ ಜೀವನ ಚರಿತ್ರೆ ರಕ್ಷಿಸಲಾಗಿದೆ. ಇತಿಹಾಸದುದ್ದಕ್ಕೂ ಯಾರ ಜೀವನ ಚರಿತ್ರೆಯೂ ರಕ್ಷಿಸಲಾಗಿಲ್ಲ. ಬದಲಾಗಿ ಅವರು ಹೇಗೆ ಮಲಗುತ್ತಿದ್ದರು, ಹೇಗೆ ತಿನ್ನುತ್ತಿದ್ದರು, ಕುಡಿಯುತ್ತಿದ್ದರು ಹಾಗೂ ಹೇಗೆ ಮಂದಹಾಸ

ಬೀರುತ್ತಿದ್ದರು ಎಂಬ ವಿಷಯಗಳನ್ನೂ ಸಹ ಹದೀಸಿನ ಗ್ರಂಥಗಳಲ್ಲಿ ಸಂರಕ್ಷಿಸಲಾಗಿದೆ.

ಪ್ರವಾದಿಯವರ(ﷺ) ಮನೆಯಲ್ಲಿ ಅವರ ಮನೆಯವ-ರೊಂದಿಗಿದ್ದ ವರ್ತನೆ.

ಪ್ರವಾದಿಯವರ ಸ್ಥಿತಿಗತಿಗಳು ಅವರ ಜೀವನ ಚರಿತ್ರೆಯ ಗ್ರಂಥಗಳಲ್ಲಿ ಸಂರಕ್ಷಿಸಿ ದಾಖಲಿಸಲಾಗಿದೆ. ಅವರೊಬ್ಬ ಮನುಷ್ಯರು ಹಾಗೂ ಸಂದೇಶವಾಹಕರಾಗಿದ್ದರು. ಅವರಿಗೆ ರುಬೂಬಿಯತ್ತಿನ ಯಾವ ವಿಶೇಷತೆಯೂ ಇರಲಿಲ್ಲ. ಅವರು ತನಗೆ ಯಾವುದೇ ಲಾಭ ಹಾಗೂ ನಷ್ಟದ ಸ್ವಾಧೀನವೂ ಹೊಂದಿಲ್ಲ.

## 4. ಪ್ರವಾದಿಯವರ ಸಂದೇಶ

ಭೂಮಿಯ ನಾನಾ ಭಾಗಗಳಲ್ಲಿ ಬಹುದೇವತ್ವ, ಅವಿಶ್ವಾಸ ಹಾಗೂ ಅಜ್ಞಾನವು ಹರಡಿದಾಗ ಅಲ್ಲಾಹನು ಪ್ರವಾದಿ

ಮುಹಮ್ಮದ್ (ﷺ) ರವರನ್ನು ಕಳುಹಿಸಿದನು. ಅಲ್ಲಾಹನ ಜೊತೆ ಇತರರನ್ನು ಸಹಭಾಗಿಯಾನ್ನಾಗಿ ಮಾಡದೆ ಕೇವಲ ಏಕೈಕ ಅಲ್ಲಾಹನ ಆರಾಧನೆ ಮಾಡುವ ಯಾವೊಬ್ಬ ವ್ಯಕ್ತಿಯೂ ಭೂಲೋಕದಲ್ಲಿರಲಿಲ್ಲ. ಆಗ ಅಲ್ಲಾಹನು ತನ್ನ ಸಂದೇಶವಾಹಕರಾದ ಮುಹಮ್ಮದ್ (ﷺ) ರವರನ್ನು ಎಲ್ಲಾ ಸಂದೇಶವಾಹಕರ ಹಾಗೂ ಪ್ರವಾದಿಗಳ ಅಂತಿಮ ಪ್ರವಾದಿಯನ್ನಾಗಿ ಮಾಡಿ ಕಳುಹಿಸಿದನು. ಜನರನ್ನು ಬಹುದೇವಾರಾಧನೆ ಮತ್ತು ಅವಿಶ್ವಾಸ ಹಾಗೂ ಅಜ್ಞಾನದ ಅಂಧಕಾರಗಳಿಂದ ಹೊರತೆಗೆದು ತೌಹೀದ್ ಹಾಗೂ ವಿಶ್ವಾಸದ ಪ್ರಕಾಶದೆಡೆಗೆ ತಲುಪಿಸಲು ಮತ್ತು ಅದು (ನೈಜಧರ್ಮವು) ಎಲ್ಲಾ ಧರ್ಮಗಳ ಮೇಲೂ ಮೇಲುಗೈ ಸಾಧಿಸಲೆಂದು.

ಅಲ್ಲಾಹನು ತನ್ನ ಸಂದೇಶವಾಹಕರನ್ನು ಇಡೀ ಮಾನವಕುಲಕ್ಕೆ ಸನ್ಮಾರ್ಗದರ್ಶನ ಹಾಗೂ ಸತ್ಯ ಧರ್ಮದೊಂದಿಗೆ ಕಳುಹಿಸಿದನು. ಅವರ ಸಂದೇಶವು

ಗತಿಸಿಹೋದ ಪ್ರವಾದಿಗಳ (عليه السلام) ಸಂದೇಶಗಳಿಗೆ ಪರಿಪೂರ್ಣತೆಯಾಗಿದೆ.

ಇತರೆ ಸಂದೇಶವಾಹಕರು: ನೂಹ್, ಇಬ್ರಾಹೀಮ್, ಸುಲೈಮಾನ್, ದಾವೂದ್, ಹಾಗೂ ಈಸಾ (عليه السلام) ರು ತಮ್ಮ ಸಮುದಾಯದ ಜನರಿಗೆ ನಿಮ್ಮ ಪರಿಪಾಲಕ, ನಿಮ್ಮ ಸೃಷ್ಟಿಕರ್ತ ನಿಮಗೆ ಜೀವನಾಧಾರ ನೀಡುವವನು, ನಿಮ್ಮನ್ನು ಜೀವಂತಗೊಳಿಸುವವನು, ನಿಮಗೆ ಮರಣ ನೀಡುವವನು, ಸರ್ವ ಅಧಿಪತ್ಯದ ಒಡೆಯನು ಅಲ್ಲಾಹನೇ ಆಗಿರುವನು ಎಂಬ ವಿಶ್ವಾಸದೆಡೆಗೆ ಆಹ್ವಾನಿಸಿದರು. ಇದೇ ವಿಶ್ವಾಸದೆಡೆಗೆ ಪ್ರವಾದಿ ಮುಹಮ್ಮದ್ (ﷺ) ರವರು ತನ್ನ ಸಮುದಾಯದ ಜನರನ್ನು ಆಹ್ವಾನಿಸಿದರು. ಅವನು (ಅಲ್ಲಾಹನು) ಮಹಾ ಕರುಣಾಮಯಿ ಮತ್ತು ಬಹಳ ದಯೆ ತೋರುವವನು, ನಾವು ನೋಡುವ ಹಾಗೂ ನೋಡದೇ ಇರುವ ಜಗತ್ತಿನ ಪ್ರತಿಯೊಂದು ವಸ್ತುವಿನ ನಿರ್ಮಾತೃ ಅವನೇ ಆಗಿರುವನು ಮತ್ತು ಅಲ್ಲಾಹನ

ಹೊರತಾಗಿರುವ ಪ್ರತಿಯೊಂದು ವಸ್ತುವೂ ಅವನ ಸೃಷ್ಟಿಯಾಗಿದೆಂದು ಪ್ರವಾದಿ(ﷺ) ರವರು ತನ್ನ ಸಮು-ದಾಯದವರಿಗೆ ಒತ್ತಿ ಒತ್ತಿ ಉಪದೇಶಿಸಿದರು.

ಅವರು ಏಕೈಕ ಅಲ್ಲಾಹನನ್ನು ಆರಾಧಿಸಿರಿ ಹಾಗೂ ಅವನ ಹೊರತಾಗಿರುವ ಮಿಥ್ಯ ದೇವರುಗಳ ಆರಾಧನೆಯನ್ನು ಬಿಟ್ಟುಬಿಡಿರೆಂದು ಜನರನ್ನು ಆಹ್ವಾನಿಸಿದರು.

ಅಲ್ಲಾಹನು ಏಕೈಕನಾಗಿದ್ದಾನೆ. ಅವನ ಆರಾಧನೆಯಲ್ಲಿ ಅಥವಾ ಅವನ ಅಧಿಪತ್ಯದಲ್ಲಿ ಅಥವಾ ಅವನ ಸೃಷ್ಟಿಯಲ್ಲಿ ಅಥವಾ ಅವನ ಕಾರ್ಯ ನಿಯಂತ್ರಣದ-ಲ್ಲಿ ಅವನ ಜೊತೆ ಯಾವುದೇ ಸಹಭಾಗಿಗಳಿಲ್ಲವೆಂದು ಪ್ರವಾದಿಯವರು(ﷺ) ಬಹಳ ಸ್ಪಷ್ಟವಾಗಿ ಜನರಿಗೆ ವಿವರಿಸಿದರು. ಖಂಡಿತವಾಗಿಯೂ ಅಲ್ಲಾಹನು ಅತ್ಯಂತ ಪರಮ ಪಾವನನಾಗಿದ್ದಾನೆ. ಅವನು ಯಾರಿಂದಲೂ ಜನಿಸಿಲ್ಲ. ಅವನಿಂದಲೂ ಯಾರೂ ಜನಿಸಿಲ್ಲ ಮತ್ತು

ಅವನಿಗೆ ಸರಿಸಮಾನರು ಯಾರು ಇಲ್ಲ ಮತ್ತು ಅವನಿಗೆ ಹೋಲುವಂತಹ ಯಾವ ವಸ್ತುವೂ ಭೂಮ್ಯಾಕಾಶಗಳಲಿಲ್ಲ ಮತ್ತು ಅವನು ತನ್ನ ಸೃಷ್ಟಿಗಳಲ್ಲಿ ಯಾರಲ್ಲೂ ಪ್ರವೇಶಿಸುವುದಿಲ್ಲ ಹಾಗೂ ಯಾರ ರೂಪವನ್ನೂ ಪಡೆಯುವುದಿಲ್ಲವೆಂದು ಪ್ರವಾದಿಯವರು(ﷺ) ಜನರಿಗೆ ವಿವರಿಸಿ ಹೇಳಿದರು.

ಪ್ರವಾದಿಯವರು(ﷺ) ಆಕಾಶದಿಂದ ಅವತೀರ್ಣಗೊಂಡ ಇಬ್ರಾಹೀಮ್ ಮತ್ತು ಮೂಸಾ (عليهم السلام) ರ ಗ್ರಂಥಗಳಲ್ಲಿ ಮತ್ತು ತೌರಾತ್, ಝುಬೂರ್, ಹಾಗೂ ಇಂಜೀಲ್ ಗ್ರಂಥಗಳ ಮೇಲೆ ಮತ್ತು ಎಲ್ಲಾ ಸಂದೇಶವಾಹಕರ (عليهم السلام) ಮೇಲೆ ವಿಶ್ವಾಸವಿರಿಸಿರಿಸಿರೆಂದು ಜನರನ್ನು ಆಹ್ವಾನ ಕೊಟ್ಟರು. ಒಬ್ಬ ಸಂದೇಶವಾಹಕನನ್ನು ನಿರಾಕರಿಸುವುದು ಸಕಲ ಸಂದೇಶವಾಕರನ್ನು ನಿರಾಕರಿಸುವುದಕ್ಕೆ ಸಮಾನ ಎಂದು ಹೇಳಿದರು.

ಅಲ್ಲಾಹನ ಕರುಣೆಯನ್ನು ಮತ್ತು ಅವನೇ ಮಾನವರ ಐಹಿಕ ಅವಶ್ಯಕತೆಗಳನ್ನು ಪೂರೈಸುವವನು ಮತ್ತು ಆ ಅಲ್ಲಾಹನೇ ಪರಿಪಾಲಕನು ಹಾಗೂ ದಯೆತೋರುವ-ವನೆಂದು ಇಡೀ ಮಾನವ ಕುಲಕ್ಕೆ ಪ್ರವಾದಿಯವರು ಶುಭವಾರ್ತೆ ನೀಡಿದರು. ಆ ಏಕೈಕ ಅಲ್ಲಾಹನೇ ಜನರನ್ನು ಪುನರುತ್ಥಾನ ದಿನದಂದು ಅವರ ಸಮಾಧಿಗಳಿಂದ ಎಬ್ಬಿಸಿ ಅವರಿಗೆ ವಿಚಾರಣೆಗೆ ಒಳಪಡಿಸುವನು ಮತ್ತು ಅವನೇ ಸತ್ಯ ವಿಶ್ವಾಸಿಗಳಿಗೆ ಅವರ ಸತ್ಕರ್ಮಗಳ ಬದಲಾಗಿ ಹತ್ತು ಪಟ್ಟು ಪ್ರತಿಫಲವನ್ನು ನೀಡುವನು ಮತ್ತು ಕೆಡುಕಿಗೆ ಅದರ ಸಮಾನವಾಗಿರುವ ಪ್ರತಿಫಲವನ್ನಲ್ಲದೆ ಇನ್ನೇನು ಕೊಡಲಾಗುವುದಿಲ್ಲ ಮತ್ತು ಸತ್ಯ ವಿಶ್ವಾಸಿಗಳು ಪರಲೋಕ ದಿನದಂದು ಸುಖಾನುಭೂತಿಗಳಿಂದ ತುಂಬಿದ ಸ್ವರ್ಗೋ-ದ್ಯಾನಗಳಲ್ಲಿರುವರು ಮತ್ತು ಸತ್ಯವನ್ನು ನಿಷೇಧಿಸಿ ದುಷ್ಕೃತ್ಯವೆಸಗಿದವನು ಇಹಪರ ಲೋಕದಲ್ಲಿ ಅದರ ಕೆಟ್ಟ ಪ್ರತಿಫಲ ಪಡೆಯುವನು.

ಪ್ರವಾದಿ ಮುಹಮ್ಮದ್ (ﷺ) ರವರು ತಮ್ಮ ಸಂದೇಶದಲ್ಲಿ ತನ್ನ ಗೋತ್ರವನ್ನು ಅಥವಾ ತನ್ನ ನಗರವನ್ನು ಅಥವಾ ತನ್ನ ಗೌರವಾನ್ವಿತ ವ್ಯಕ್ತಿತ್ವವನ್ನು ಶ್ಲಾಘಿಸಲಿಲ್ಲ. ಆದರೆ ಪವಿತ್ರ ಕುರ್‌ಆನಿನಲ್ಲಿ ಪ್ರವಾದಿ ಮುಹಮ್ಮದ್ (ﷺ) ಅವರಿಗಿಂತಲೂ ನೂಹ್, ಇಬ್ರಾಹೀಮ್, ಮೂಸಾ, ಈಸಾ (عليهم السلام) ಪ್ರವಾದಿಗಳ ಹೆಸರು ಹೆಚ್ಚಾಗಿ ಉಲ್ಲೇಖಿಸಲಾಗಿದೆ.

ಪ್ರವಾದಿ ಮುಹಮ್ಮದ್ (ﷺ) ರ ತಾಯಿ ಹಾಗೂ ಅವರ ಪತ್ನಿಯರ ಹೆಸರು ಪವಿತ್ರ ಕುರ್‌ಆನಿನಲ್ಲಿ ಉಲ್ಲೇಖಿಸ-ಲಾಗಿಲ್ಲ. ಆದರೆ ಮೂಸಾ (عليه السلام) ರ ತಾಯಿಯ ಹೆಸರು ಒಂದಕ್ಕಿಂತ ಹೆಚ್ಚು ಬಾರಿ ಕುರ್‌ಆನಿನಲ್ಲಿ ಉಲ್ಲೇಖಿಸಲಾ-ಗಿದೆ ಮರ್ಯಮ್ (عليها السلام) ರ ಹೆಸರು ಕುರ್‌ಆನಿನಲ್ಲಿ 35 ಬಾರಿ ಉಲ್ಲೇಖಿಸಲಾಗಿದೆ.

ಪ್ರವಾದಿ ಮುಹಮ್ಮದ್(ﷺ) ರು ಅಲ್ಲಾಹನ ನಿಯಮಾವಳಿಗೆ ವಿರೋಧವಾಗುವ, ಮಾನವನ ಬುದ್ಧಿ

ಮತ್ತು ಸ್ವಭಾವಕ್ಕೆ ಎಟುಕುವ ಅಥವಾ ಸದ್ಗುಣಗಳು ನಿರಾಕರಿಸುವಂತಹ ಪ್ರತಿಯೊಂದು ವಿಷಯದಿಂದ ಸುರಕ್ಷಿತವಾಗಿದ್ದರು. ಏಕೆಂದರೆ ಅಲ್ಲಾಹನ ಸಂದೇಶವಾಹಕರು(ﷺ) ಅಲ್ಲಾಹನ ಸಂದೇಶವನ್ನು ತಲುಪಿಸುವ ವಿಷಯದಲ್ಲಿ ತಪ್ಪಿನಿಂದ ಸಂರಕ್ಷಣೆ ನೀಡಲ್ಪಟ್ಟವರಾಗಿದ್ದರು. ಸಂದೇಶವಾಹಕರ(ﷺ) ಮೇಲೆ ಅಲ್ಲಾಹನ ಆದೇಶವನ್ನು ಅವನ ದಾಸರಿಗೆ ತಲುಪಿಸುವ ಹೊಣೆ ಹೊರಿಸಲಾಗಿರುತ್ತದೆ. ಅವರಿಗೆ ರುಬೂಬಿಯತ್ ಅಥವಾ ಉಲೂಹಿಯತ್ತಿನ ಯಾವ ವಿಶೇಷತೆಯೂ ಇರುವುದಿಲ್ಲ. ಬದಲಾಗಿ ಇತರೆ ಮನುಷ್ಯರಂತೆ ಅವರೂ ಸಹ ಒಬ್ಬ ಮನುಷ್ಯರಾಗಿರುತ್ತಾರೆ ಮತ್ತು ಅಲ್ಲಾಹನ ಬಳಿಯಿಂದ ಅಲ್ಲಾಹನ ಸಂದೇಶಗಳು ಅವರ ಬಳಿ ಅವತೀರ್ಣವಾಗುತ್ತವೆ.

ಪ್ರವಾದಿ ಮುಹಮ್ಮದ್ (ﷺ) ರವರ ಸಂದೇಶವು ಅಲ್ಲಾಹನ ವತಿಯ ದಿವ್ಯವಾಣಿ ಎಂಬುದಕ್ಕೆ ಅತ್ಯಂತ

ದೊಡ್ಡ ಪುರಾವೆ ಅದು ಪ್ರವಾದಿಯವರ(ﷺ) ಜೀವನದಲ್ಲಿ ಇದ್ದಂತೆ ಇಂದಿಗೂ ಅದೇ ರೂಪದಲ್ಲಿ ಅಸ್ತಿತ್ವದಲ್ಲಿದೆ ಹಾಗೂ ಶತ ಕೋಟಿಗಿಂತಲೂ ಹೆಚ್ಚು ಮುಸ್ಲಿಮರು ಅದರಲ್ಲಿ ಯಾವುದೇ ಬದಲಾವಣೆ ಮಾಡದೆ ಮತ್ತು ಅದರ ಅರ್ಥ ವ್ಯತ್ಯಾಸ ಮಾಡದೆ ನಮಾಝ್, ಝಕಾತ್, ಉಪವಾಸ ಮತ್ತು ಹಜ್ಜ್ ಎಂಬ ಅದರ ಕಡ್ಡಾಯ ಕರ್ಮಗಳನ್ನು ತಮ್ಮ ಜೀವನದಲ್ಲಿ ಜಾರಿಗೊಳಿಸುತ್ತಿದ್ದಾರೆ.

## 5. ಮುಹಮ್ಮದ್(ﷺ) ರವರ ಸಂದೇಶವಾಹಕತ್ವದ ಕುರುಹುಗಳು, ಅದರ ಚಿಹ್ನೆಗಳು ಹಾಗೂ ಅದರ ಪುರಾವೆಗಳು

ಅಲ್ಲಾಹು ತನ್ನ ಸಂದೇಶವಾಹಕರನ್ನು ಅವರ ಸಂದೇಶ ವಾಹಕತ್ವ ಸಾಬೀತುಪಡಿಸುವ ಕುರುಹುಗಳೊಂದಿಗೆ ಅವರನ್ನು ಬೆಂಬಲ ನೀಡುತ್ತಾನೆ ಮತ್ತು ಅವರ ಸಂದೇ-ಶವಾಹಕತ್ವದ ಮೇಲೆ ಸಾಕ್ಷಿಯಾಗಿರುವ ಪುರಾವೆ ಮತ್ತು

ಆಧಾರಗಳನ್ನು ನೆಲೆ ನಿಲ್ಲಿಸುತ್ತಾನೆ. ಖಂಡಿತವಾಗಿಯೂ ಅಲ್ಲಾಹನು ತನ್ನ ಪ್ರತಿಯೊಬ್ಬ ಪ್ರವಾದಿಗೆ ಮನುಷ್ಯರು ಅವರ ಮೇಲೆ ವಿಶ್ವಾಸವಿರಿಸಲಿಕ್ಕೆ ಸಾಕಾಗುವಂತಹ ಪವಾಡಗಳನ್ನು ನೀಡಿದ್ದಾನೆ, ಪ್ರವಾದಿಗಳಿಗೆ ನೀಡಲ್ಪಟ್ಟ ಪವಾಡಗಳಲ್ಲಿ ಅತ್ಯಂತ ದೊಡ್ಡ ಪವಾಡ ನಮ್ಮ ಪ್ರವಾದಿ ಮುಹಮ್ಮದ್ (ﷺ) ರವರ ಪವಾಡವಾಗಿದೆ. ಖಂಡಿತವಾಗಿಯೂ ಅಲ್ಲಾಹನು ಪ್ರವಾದಿ ಮುಹಮ್ಮದ್ (ﷺ) ರಿಗೆ ಪವಿತ್ರ ಕುರ್‌ಆನ್ ಎಂಬ ಗ್ರಂಥವನ್ನು ನೀಡಿದನು. ಅದು ಸಂದೇಶವಾಹಕರ ಪವಾಡಗಳಲ್ಲಿ ಪುನರುತ್ಥಾನದವರೆಗೂ ಶಾಶ್ವತವಾಗಿರುವ ಪವಾಡವಾಗಿದೆ. ಅಲ್ಲಾಹನು ಈ ಕುರ್‌ಆನ್ ಗ್ರಂಥವನ್ನು ಮಹಾ ಪವಾಡಗಳೊಂದಿಗೆ ಬೆಂಬಲಿಸಿದನು. ಪ್ರವಾದಿ ಮುಹಮ್ಮದ್ (ﷺ) ರವರ ಪವಾಡಗಳು ಬಹಳಷ್ಟಿವೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ.

ಇಸ್ರಾ ಮೆಅರಾಜ್, ಚಂದ್ರ ಎರಡು ಹೋಳಾದದ್ದು,

ಜನರಿಗೆ ಮಳೆ ಇಲ್ಲದಿದ್ದಾಗ ಪ್ರವಾದಿಯವರು(ﷺ) ಮಳೆಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸಿದ ನಂತರ ಹಲವಾರು ಬಾರಿ ಮಳೆ ಸುರಿದದ್ದು. ಕಡಿಮೆ ನೀರು ಮತ್ತು ಆಹಾರ ಅಧಿಕವಾಗುವುದು ಮತ್ತು ಅದರಿಂದ ಜನರ ಒಂದು ದೊಡ್ಡ ಗುಂಪು ತಿನ್ನುವುದು ಅಥವಾ ಕುಡಿಯುವುದು.

ಯಾರೂ ಅರಿಯದ ಅಗೋಚರ ವಿಷಯಗಳ ಕುರಿತು ಮಾಹಿತಿ ನೀಡುವುದು. ಉದಾಹರಣೆಗೆ ಗತ ಸಂದೇಶವಾಹಕರ ಮತ್ತು ಅವರ ಸಮುದಾಯದವರ ಘಟನೆಗಳು, ಗುಹೆಯವರ ಘಟನೆ.

ಅಲ್ಲಾಹು ಪ್ರವಾದಿಯವರಿಗೆ(ﷺ) ಮಾಹಿತಿ ನೀಡಿದ ನಂತರ ಭವಿಷ್ಯ ಕಾಲದಲ್ಲಿ ಸಂಭವಿಸುವ ಘಟನೆಗಳ ಕುರಿತು ಮಾಹಿತಿ ನೀಡುವುದು. ಉದಾಹರಣೆಗೆ ಹಿಜಾಝ್‌ನ ಭೂಮಿಯಿಂದ ಹೊರಬರುವ ಬೆಂಕಿಯ ಕುರಿತು ಮಾಹಿತಿ ನೀಡುವುದು. ಶಾಮ್ ದೇಶದಲ್ಲಿದ್ದವನು

ಆ ಬೆಂಕಿಯನ್ನು ನೋಡುವನು. ಜನರು ಕಟ್ಟಡಗಳನ್ನು ಕಟ್ಟುವುದರಲ್ಲಿ ಪೈಪೋಟಿ ನಡೆಸುವುದು.

ಅಲ್ಲಾಹು ಪ್ರವಾದಿಯವರಿಗೆ (ಐಹಿಕ ಕಷ್ಟ ಕಾರ್ಯಗಳಲ್ಲಿ) ಸಾಕಾಗುವುದು ಮತ್ತು ಜನರಿಂದ ಅವರನ್ನು ಕಾಪಾಡುವುದು.

ಪ್ರವಾದಿಯವರು(ﷺ) ತಮ್ಮ ಸಹಚರರಿಗೆ ನೀಡಿದ ಭವಿಷ್ಯವಾಣಿಗಳು ಈಡೇರುವುದು. ಉದಾಹರಣೆಗೆ: "ಖಂಡಿತವಾಗಿಯೂ ನೀವು ಪರ್ಶಿಯಾ ಮತ್ತು ರೋಮನ್ನು ವಶಪಡಿಸಿಕೊಳ್ಳುತ್ತೀರಿ ಮತ್ತು ಅದರ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುತ್ತೀರಿ" ಎಂದು ಪ್ರವಾದಿಯವರು(ﷺ) ಭವಿಷ್ಯವಾಣಿ ನುಡಿದಿದ್ದರು.

ಪ್ರವಾದಿಯವರಿಗೆ ದೇವಚರರ ಮೂಲಕ ಅಲ್ಲಾಹನು ಬೆಂಬಲ ನೀಡುವುದು. ಗತ ಸಂದೇಶವಾಹಕರು ತಮ್ಮ

ಸಮುದಾಯದ ಜನರಿಗೆ ಪ್ರವಾದಿ ಮುಹಮ್ಮದ್ (ﷺ) ರವರ ಸಂದೇಶವಾಹಕತ್ವದ ಶುಭವಾರ್ತೆ ನೀಡುವುದು. ಆ ಸಂದೇಶವಾಹಕರಲ್ಲಿ ಮೂಸಾ, ದಾವೂದ್, ಸುಲೈಮಾನ್, ಈಸಾ ಮತ್ತು ಬನೀ ಇಸ್ರಾಯೀಲರ ಇನ್ನಿತರೆ ಸಂದೇಶವಾಹಕರು ಪ್ರವಾದಿ ಮುಹಮ್ಮದ್ (ﷺ) ರ ಆಗಮನದ ಶುಭವಾರ್ತೆ ನೀಡಿದ್ದರು.

ವಿವೇಚನಾ ಪೂರ್ವ ಪುರಾವೆಗಳೊಂದಿಗೆ ಮತ್ತು ಸ್ವಸ್ಥ ಬುದ್ಧಿಗಳು ಒಪ್ಪಿಕೊಳ್ಳುವ ಉದಾಹರಣೆಗಳೊಂದಿಗೆ[5]

5 ಉದಾಹರಣೆಗೆ ಅಲ್ಲಾಹನ ಈ ವಚನ: "ಓ ಜನರೇ! ಒಂದು ಉದಾಹರಣೆಯನ್ನು ನೀಡಲಾಗುತ್ತದೆ. ಅದನ್ನು ಕಿವಿಗೊಟ್ಟು ಕೇಳಿರಿ. ಖಂಡಿತವಾಗಿಯೂ ನೀವು ಅಲ್ಲಾಹುವಿನ ಹೊರತು ಕರೆದು ಪ್ರಾರ್ಥಿಸುವವರು ಒಂದು ನೊಣವನ್ನೂ ಸೃಷ್ಟಿಸಲಾರರು. ಅದಕ್ಕಾಗಿ ಅವರೆಲ್ಲರೂ ಒಟ್ಟುಗೂಡಿದರೂ ಸಹ! ನೊಣವು ಅವರಿಂದ ಏನನ್ನಾದರೂ ಕಸಿದುಕೊಂಡು ಹೋದರೆ ಅದರಿಂದ ಅದನ್ನು ಮರಳಿ ಪಡೆಯಲು ಅವರಿಗೆ ಸಾಧ್ಯವಾಗದು. ಪ್ರಾರ್ಥಿಸುವವನೂ ಪ್ರಾರ್ಥಿಸಲ್ಪಡುವ ವನೂ ಬಲಹೀನರಾಗಿರುವರು!"

ಅಲ್ಲಾಹನು ಪ್ರವಾದಿಯವರನ್ನು ಕಳುಹಿಸಿದನು.

ಈ ರೀತಿಯ ಸೂಕ್ತಗಳು ಮತ್ತು ಪುರಾವೆಗಳು ಮತ್ತು ತರ್ಕಬದ್ಧ ಉದಾಹರಣೆಗಳು ಕುರ್‌ಆನ್ ಮತ್ತು ಪ್ರವಾದಿಯವರ(ﷺ) ವಚನಗಳಲ್ಲಿ ಬಹಳಷ್ಟು ಹರಡಿವೆ ಮತ್ತು ಎಣಿಸಲಾಗದಷ್ಟು ಕುರ್‌ಆನಿನ ಸೂಕ್ತಗಳಿವೆ. ಇದರ ಕುರಿತು ಜ್ಞಾನ ಪಡೆಯಲು ಬಯಸುವವನು ಪವಿತ್ರ ಕುರ್‌ಆನ್ ಮತ್ತು ಸುನ್ನತ್ ಹಾಗೂ ಪ್ರವಾದಿಯವರ ಜೀವನ ಚರಿತ್ರೆಯ ಪುಸ್ತಕಗಳ ಬಳಿ ಮರಳಲಿ. ಅವುಗಳಲ್ಲಿ ಈ ಪವಾಡಗಳ ಕುರಿತು ನಿಶ್ಚಿತ ಸುಳಿವುಗಳಿವೆ.

ಒಂದು ವೇಳೆ ಈ ಪವಾಡಗಳು ಸಂಭವಿಸದೆ ಇರುತ್ತಿದ್ದರೆ ಅರೇಬಿಯಾದಲ್ಲಿದ್ದ ಖುರೈಶ್ ಗೋತ್ರದ, ಯಹೂದಿ ಮತ್ತು ಕ್ರಿಶ್ಚಿಯನ್ನರ ಸತ್ಯನಿಷೇಧಿಗಳು ಪ್ರವಾದಿ (ﷺ) ರವರನ್ನು ನಿರಾಕರಿಸುವ ಮತ್ತು ಅವರಿಂದ

---

(ಸೂರ ಅಲ್ ಹಜ್ಜ್)

ಜನರನ್ನು ಮುಂಜಾಗ್ರತೆಗೊಳಿಸುವ ಅವಕಾಶವನ್ನು ಪಡೆದುಕೊಳ್ಳುತ್ತಿದ್ದರು.

ಪವಿತ್ರ ಕುರ್‌ಆನ್ ಅಲ್ಲಾಹನು ತನ್ನ ಪ್ರವಾದಿ ಮುಹಮ್ಮದ್ (ﷺ) ರ ಮೇಲೆ ಅವತೀರ್ಣಗೊಳಿಸಿದ ಗ್ರಂಥವಾಗಿದೆ. ಅದು ಸಕಲ ಲೋಕಗಳ ಪರಿಪಾಲಕ ಪ್ರಭುವಾದ ಅಲ್ಲಾಹನ ವಚನವಾಗಿದೆ. ಅಲ್ಲಾಹನು ಜಿನ್ನ್ ಮತ್ತು ಮನುಷ್ಯ ವರ್ಗದವರನ್ನು ಅದೇ ರೀತಿಯ ಒಂದು ಗ್ರಂಥ ಅಥವಾ ಅದೇ ರೀತಿಯ ಒಂದು ಅಧ್ಯಾಯವನ್ನಾದರು ರಚಿಸಿ ತರಲಿಕ್ಕೆ ಸವಾಲೊಡ್ಡಿದ್ದಾನೆ. ಈ ಸವಾಲು ಇಂದಿನವರೆಗೂ ಹಾಗೆ ಉಳಿದಿದೆ. ಪವಿತ್ರ ಕುರ್‌ಆನ್ ಗ್ರಂಥವು ಶತ ಕೋಟಿಗಟ್ಟಲೆ ಜನರನ್ನು ಗೊಂದಲಗೊಳಿಸುವ ಬಹಳಷ್ಟು ಪ್ರಮುಖ ಪ್ರಶ್ನೆಗಳಿಗೆ ಉತ್ತರಿಸುತ್ತದೆ. ಪವಿತ್ರ ಕುರ್‌ಆನ್ ಅವತೀರ್ಣವಾದ ಅರಬಿ ಭಾಷೆಯಲ್ಲಿ ಇಂದಿನವರೆಗೂ ಹಾಗೆ ಸುರಕ್ಷಿತವಾಗಿದೆ. ಅದರಲ್ಲಿ ಒಂದು ಅಕ್ಷರವೂ ಕಡಿಮೆಯಾಗಿಲ್ಲ.

ಅದು ಮುದ್ರಿಸಲಾಗುತ್ತದೆ ಹಾಗೂ ಪ್ರಕಟಿಸಲಾ-ಗುತ್ತದೆ. ಅದು ಅಸಹಾಯಕಗೊಳಿಸುವ ಒಂದು ಮಹಾನ್ ಗ್ರಂಥವಾಗಿದೆ. ಅದು ಜನರ ಬಳಿಗೆ ಬಂದ ಒಂದು ಅತ್ಯುನ್ನತ ಪುಸ್ತಕವಾಗಿದೆ. ಅದು ಪಠಿಸಲಿಕ್ಕೂ ಅಥವಾ ಅದರ ಅರ್ಥ ಅನುವಾದವನ್ನು ಓದಲಿಕ್ಕೂ ಯೋಗ್ಯವಾಗಿದೆ ಮತ್ತು ಅದನ್ನು ಅರಿಯದವನು ಹಾಗೂ ಅದರ ಮೇಲೆ ವಿಶ್ವಾಸವಿರಿಸದವನು ಎಲ್ಲಾ ರೀತಿಯ ಒಳಿತುಗಳನ್ನು ಕಳೆದುಕೊಂಡವನಾಗಿದ್ದಾನೆ.

ಪ್ರವಾದಿ ಮುಹಮ್ಮದ್ (ﷺ) ರವರ ಚರ್ಯೆ ಮತ್ತು ಅವರ ಮಾರ್ಗದರ್ಶನ ಮತ್ತು ಅವರ ಚರಿತ್ರೆ ಸಂರಕ್ಷಿ-ಸಲಾಗಿದೆ. ಪ್ರವಾದಿ(ﷺ) ರವರು ನಮ್ಮ ಮಧ್ಯೆ ಬದುಕು-ತ್ತಿದ್ದಾರೆ ಎಂಬಂತೆ ಪ್ರವಾದಿ(ﷺ) ರವರು ಮಾತನಾಡಿದ ಪ್ರತಿಯೊಂದು ವಚನವೂ ವಿಶ್ವಾಸಾರ್ಹ ವರದಿಗಾರರಿಂದ ವರದಿ ಮಾಡಲಾಗಿದೆ ಹಾಗೂ ಅದು ಅರಬೀ ಭಾಷೆಯಲ್ಲಿ ಮುದ್ರಿಸಲ್ಪಟ್ಟಿದೆ. ಪವಿತ್ರ ಕುರ್‌ಆನ್ ಮತ್ತು

ಪ್ರವಾದಿಯವರ ಚರ್ಯೆ ಇತರೆ ಬಹಳಷ್ಟು ಭಾಷೆಗಳಲ್ಲಿ ಅನುವಾದಿಸಲಾಗಿದೆ ಮತ್ತು ಅವೆರಡೇ ಇಸ್ಲಾಮಿನ ಕರ್ಮಮಾರ್ಗ ಹಾಗೂ ಅದರ ನೀತಿ-ನಿಯಮಗಳ ಮೂಲವಾಗಿವೆ.

## 6. ಪ್ರವಾದಿ ಮುಹಮ್ಮದ್ (ﷺ) ರವರು ತಂದ ಇಸ್ಲಾಮೀ ಧರ್ಮಶಾಸ್ತ್ರ

ಪ್ರವಾದಿ ಮುಹಮ್ಮದ್ (ﷺ) ರವರು ತಂದ ಧರ್ಮಶಾಸ್ತ್ರ ಅದು ಇಸ್ಲಾಮಿನ ಧರ್ಮಶಾಸ್ತ್ರವಾಗಿದೆ ಮತ್ತು ಅಲ್ಲಾಹನ ಬಳಿಯಿಂದ ಅವತೀರ್ಣಗೊಂಡ ಧರ್ಮಶಾಸ್ತ್ರಗಳ ಮತ್ತು ಸಂದೇಶಗಳ ಅಂತಿಮ ಧರ್ಮಶಾಸ್ತ್ರ ಹಾಗೂ ಅಂತಿಮ ಸಂದೇಶವಾಗಿದೆ. ಅದು ಗತ ಪ್ರವಾದಿಗಳ ಧರ್ಮ-ಶಾಸ್ತ್ರಗಳ ವಿಧಾನಗಳಿಗೆ ವಿಭಿನ್ನವಾದರೂ ಅದರ ಮೂಲಭೂತ ವಿಷಯಗಳಿಗೆ ಹೋಲುತ್ತದೆ.

ಅದು ಪರಿಪೂರ್ಣ ಧರ್ಮಶಾಸ್ತ್ರವಾಗಿದೆ. ಅದು

ಪ್ರತಿಯೊಂದು ಕಾಲ ಮತ್ತು ಸ್ಥಳಕ್ಕೂ ಯೋಗ್ಯವಾಗಿದೆ. ಅದರಲ್ಲಿ ಜನರ ಧಾರ್ಮಿಕ ಮತ್ತು ಪ್ರಾಪಂಚಿಕ ಒಳಿತುಗಳಿವೆ. ಅದು ಸಕಲ ಲೋಕಗಳ ಪರಿಪಾಲಕ ಪ್ರಭುವಾದ ಅಲ್ಲಾಹನ ದಾಸರ ಮೇಲೆ ಕಡ್ಡಾಯಗೊಳಿಸಲಾಗಿರುವ ಎಲ್ಲಾ ಆರಾಧನೆಗಳನ್ನು ಒಳಗೊಂಡಿರುತ್ತದೆ. ಉದಾ: ನಮಾಝ್, ಝಕಾತ್ ಅವರ ಇಹ ಪರ ಜೀವನಕ್ಕೆ ಅಗತ್ಯವಿರುವ ಹಣಕಾಸು, ಆರ್ಥಿಕ, ಸಾಮಾಜಿಕ, ರಾಜಕೀಯ, ಯುದ್ಧ ಮತ್ತು ಅನುಮತಿಸಲಾಗಿರುವ ಹಾಗೂ ನಿಷೇಧಿತ ಪರಿಸರದ ವಹಿವಾಟುಗಳನ್ನು ವಿವರಿಸಿ ಕೊಡುತ್ತದೆ.

ಇಸ್ಲಾಮೀ ಧರ್ಮಶಾಸ್ತ್ರವು ಜನರ ಧರ್ಮ, ಅವರ ರಕ್ತ, ಅವರ ಮಾನ ಮತ್ತು ಸಂಪತ್ತು, ಹಾಗೂ ಅವರ ಬುದ್ಧಿ ಮತ್ತು ಸಂತತಿಗಳನ್ನು ಸಂರಕ್ಷಿಸುತ್ತದೆ. ಅದು ಪ್ರತಿಯೊಂದು ಪುಣ್ಯ ಹಾಗೂ ಶ್ರೇಷ್ಠತೆಯ ಕೆಲಸವನ್ನು ಒಳಗೊಂಡಿರುತ್ತದೆ ಮತ್ತು ಪ್ರತಿಯೊಂದು ಕೆಳಮಟ್ಟದ

ಹಾಗೂ ಕೆಟ್ಟ ಕಾರ್ಯದಿಂದ ಎಚ್ಚರ ಗೊಳಿಸುತ್ತದೆ.

ಇದು ಮಾನವನ ಘನತೆ, ಸಂಯಮ, ನ್ಯಾಯ, ನಿಷ್ಕಳಂಕತೆ, ಶುಚಿತ್ವ, ಅಚ್ಚುಕಟ್ಟುತನ, ಪ್ರೀತಿ, ಜನರಿಗೆ ಒಳ್ಳೆಯದನ್ನು ಪ್ರೀತಿಸುವುದು ಮತ್ತು ರಕ್ತಪಾತದಿಂದ ತಡೆಹಿಡಿಯುವುದು, ಇತರೆ ರಾಷ್ಟ್ರಗಳ ಸುರಕ್ಷತೆ ಮತ್ತು ಜನರನ್ನು ಅನ್ಯಾಯವಾಗಿ ಬೆದರಿಸುವ ಹಾಗೂ ಹೆದರಿಸುವ ನಿಷೇಧಕ್ಕೆ ಆಹ್ವಾನಿಸುತ್ತದೆ. ಪ್ರವಾದಿ ಮುಹಮ್ಮದ್ (ﷺ) ರವರು ದಬ್ಬಾಳಿಕೆ, ಭ್ರಷ್ಟಾಚಾರ ಮತ್ತು ಅದರ ಪ್ರತಿಯೊಂದು ಆಕಾರ ಮತ್ತು ರೂಪದ ವಿರುದ್ಧ ಹೋರಾಡುತ್ತಿದ್ದರು. ಅದೇ ರೀತಿ ಪ್ರವಾದಿಯವರು(ﷺ) ಮೂಢನಂಬಿಕೆ, ಪ್ರತ್ಯೇಕತೆ ಮತ್ತು ಸನ್ಯಾಸತ್ವದ ವಿರುದ್ಧವೂ ಸಹ ಹೋರಾಡುತ್ತಿದ್ದರು.

ಪ್ರವಾದಿ ಮುಹಮ್ಮದ್ (ﷺ) ರವರು ಹೇಳಿದರು:

"ಖಂಡಿತವಾಗಿಯೂ ಅಲ್ಲಾಹನು ಮಾನವನನ್ನು -ಸ್ತ್ರೀ,

ಪುರುಷರನ್ನು- ಗೌರವಿಸಿದನು ಮತ್ತು ಅವನ ಪೂರ್ಣ ಹಕ್ಕುಗಳ ಹೊಣೆಯನ್ನು ವಹಿಸಿಕೊಂಡನು. ಅವನಿಗೆ ಅವನ ಎಲ್ಲಾ ಆಯ್ಕೆಗಳ, ಅವನ ಎಲ್ಲಾ ಕಾರ್ಯಗಳ ಹಾಗೂ ಅವನ ಎಲ್ಲಾ ನಡವಳಿಕೆಗಳ ಜವಾಬ್ದಾರನನ್ನಾಗಿ ಮಾಡಿದನು. ತನಗೆ ಅಥವಾ ಇತರರಿಗೆ ಹಾನಿ ಮಾಡುವ ಯಾವುದೇ ಕ್ರಿಯೆಗೆ ಅವನೇ ಜವಾಬ್ದಾರನಾಗಿರುತ್ತಾ- ನೆಂದು ಹೇಳಿದನು. ಸತ್ಯವಿಶ್ವಾಸ, ಜವಾಬ್ದಾರಿ, ಶಿಕ್ಷೆ ಮತ್ತು ಪ್ರತಿಫಲಕ್ಕೆ ಅನುಸಾರವಾಗಿ ಸ್ತ್ರೀ ಮತ್ತು ಪುರುಷರನ್ನು ಸಮಾನರನ್ನಾಗಿ ಮಾಡಿದನು. ಈ ಇಸ್ಲಾಮೀ ಧರ್ಮ- ಶಾಸ್ತ್ರದಲ್ಲಿ ಮಹಿಳೆ ಅವಳು ಪತ್ನಿ ಆಗಿರಲಿ ಅಥವಾ ಮಗಳಾಗಿರಲಿ ಅಥವಾ ಸಹೋದರಿಯಾಗಿರಲಿ ಅವಳಿಗೆ ವಿಶೇಷ ಕಾಳಜಿ ನೀಡಲಾಗಿದೆ."

ಪ್ರವಾದಿ ಮುಹಮ್ಮದ್ (ﷺ) ರವರು ತಂದ ಇಸ್ಲಾಮೀ ಧರ್ಮಶಾಸ್ತ್ರವು ಮನುಷ್ಯನ ಬುದ್ಧಿ ಮತ್ತು ಭ್ರಷ್ಟಗೊ- ಳಿಸುವ ಪ್ರತಿಯೊಂದು ವಸ್ತುವಿನ ನಿಷೇಧದೊಂದಿಗೆ

ಬಂದಿದೆ. ಉದಾ: ಮದ್ಯಪಾನ ಮಾಡುವುದು. ಇಸ್ಲಾಮ್ ಧರ್ಮವು ಮಾನವನ ಬುದ್ಧಿಯನ್ನು ಮಾರ್ಗವನ್ನು ಬೆಳಗಿಸುವ ಪ್ರಕಾಶವೆಂದು ಪರಿಗಣಿಸಿದೆ. ಏಕೆಂದರೆ ಮಾನವನು ತನ್ನ ಸೃಷ್ಟಿಕರ್ತನನ್ನು ಜ್ಞಾನ ಮತ್ತು ಪರಿ-ಜ್ಞಾನದೊಂದಿಗೆ ಆರಾಧಿಸಲೆಂದು, ಇಸ್ಲಾಮೀ ಧರ್ಮಶಾ-ಸ್ತ್ರವು ಬುದ್ಧಿಯ ಮಹತ್ವವನ್ನು ಎತ್ತರಕ್ಕೇರಿಸಿದೆ, ಅದನ್ನು ಹೊಣೆಗಾರಿಕೆಗೆ ಕಾರಣವನ್ನಾಗಿ ಮಾಡಿದೆ, ಮತ್ತು ಅದನ್ನು ಮೂಢನಂಬಿಕೆ ಹಾಗೂ ಬಹುದೇವಾರಾ-ಧನೆಯ ಸಂಕೋಲೆಗಳಿಂದ ಸ್ವತಂತ್ರಗೊಳಿಸಿದೆ.

ಇಸ್ಲಾಮೀ ಧರ್ಮಶಾಸ್ತ್ರವು ಸರಿಯಾದ ಜ್ಞಾನವನ್ನು ಗೌರವಿಸುತ್ತದೆ, ದೇಹೇಚ್ಛೆಗಳಿಲ್ಲದ ಜ್ಞಾನ ಸಂಶೋಧನೆಯನ್ನು ಪ್ರೇರೇಪಿಸುತ್ತದೆ, ತನ್ನ ಆತ್ಮ ಹಾಗೂ ಜಗತ್ತಿನ ಬಗ್ಗೆ ಆಲೋಚನೆ ಮತ್ತು ಚಿಂತನೆ ಮಾಡುವುದರೆಡೆಗೆ ಆಹ್ವಾನಿಸುತ್ತದೆ ಮತ್ತು ಸರಿಯಾದ ಜ್ಞಾನದ ಪಲಿತಾಂಶಗಳು ಪ್ರವಾದಿ (ﷺ) ರವರು ತಂದ

ಇಸ್ಲಾಮೀ ಧರ್ಮಶಾಸ್ತ್ರಕ್ಕೆ ವಿರುದ್ಧವಾಗುವುದಿಲ್ಲ.

ಇಸ್ಲಾಮಿನಲ್ಲಿ ಒಂದು ನಿರ್ದಿಷ್ಟ ಜನಾಂಗಕ್ಕೆ ಇನ್ನೊಂದು ಜನಾಂಗಕ್ಕಿಂತ ಯಾವ ವೈಶಿಷ್ಟತೆಯೂ ಇಲ್ಲ. ಅದೇ ರೀತಿ ಇಸ್ಲಾಮಿನಲ್ಲಿ ಒಂದು ಜನಾಂಗಕ್ಕೆ ಇನ್ನೊಂದು ಜನಾಂಗದ ಮೇಲೆ ಯಾವುದೇ ಶ್ರೇಷ್ಠತೆಯೂ ಇಲ್ಲ. ಬದಲಾಗಿ ಇಸ್ಲಾಮೀ ಆದೇಶಗಳ ಮುಂದೆ ಎಲ್ಲರೂ ಸರಿ ಸಮಾನರಾಗಿದ್ದಾರೆ. ಏಕೆಂದರೆ ಎಲ್ಲಾ ಜನರ ಮೂಲವು ಸಮಾನತೆಯೇ ಆಗಿದೆ. ಒಂದು ಜಾತಿಗೆ ಇನ್ನೊಂದು ಜಾತಿಯ ಮೇಲೆ ಮತ್ತು ಒಂದು ಸಮುದಾಯಕ್ಕೆ ಇನ್ನೊಂದು ಸಮುದಾಯದ ಮೇಲೆ ಯಾವ ಶ್ರೇಷ್ಠತೆಯೂ ಇಲ್ಲ. ಶ್ರೇಷ್ಠತೆ ಇರುವುದು ಭಯ-ಭಕ್ತಿ ಪಾಲಿಸುವವರಿಗೆ ಮಾತ್ರ.

ಪ್ರವಾದಿ (ﷺ) ರವರು ಹೇಳಿದರು: "ಜನಿಸುವ ಪ್ರತಿಯೊಂದು ಮಗುವು ಇಸ್ಲಾಮೀ ಪ್ರಕೃತಿಯಲ್ಲಿ

ಜನಿಸುತ್ತದೆ. ಜನರಲ್ಲಿ ಯಾರು ತಪ್ಪು ಮಾಡುವವನಾಗಿ ಅಥವಾ ಇತರರ ತಪ್ಪಿಗೆ ಹೊಣೆಗಾರನಾಗಿ ಜನಿಸುವುದಿಲ್ಲ."

ಇಸ್ಲಾಮೀ ಧರ್ಮಶಾಸ್ತ್ರದಲ್ಲಿ ಅಲ್ಲಾಹನು ಪಶ್ಚಾತ್ತಾಪದ ನಿಯಮವನ್ನು ನೀಡಿದ್ದಾನೆ. ಅದೇನೆಂದರೆ ಮನುಷ್ಯನು ಪಾಪ ಕೃತ್ಯವನ್ನು ತೊರೆದು ತನ್ನ ಪರಿಪಾಲಕ ಪ್ರಭುವಿನ ಕಡೆ ಮರಳುವುದಾಗಿದೆ. ಇಸ್ಲಾಂ ಧರ್ಮವು ಗತಕಾಲದಲ್ಲಿ ಕಳೆದ ಎಲ್ಲಾ ಪಾಪಗಳನ್ನು ಅಳಿಸುತ್ತದೆ. ಅದೇ ರೀತಿ ಪಶ್ಚಾತ್ತಾಪವೂ ಸಹ ಗತಕಾಲದಿಂದ ಪಾಪಗಳನ್ನು ತೊಳೆದುಹಾಕುತ್ತದೆ. ಒಬ್ಬ ವ್ಯಕ್ತಿಯು ಜನರ ಮುಂದೆ ತನ್ನ ಪಾಪಗಳನ್ನು ಒಪ್ಪಿಕೊಳ್ಳುವ ಯಾವ ಅವಶ್ಯಕತೆಯೂ ಇಲ್ಲ. ಇಸ್ಲಾಮಿನಲ್ಲಿ ಮನುಷ್ಯ ಮತ್ತು ಅಲ್ಲಾಹನ ಸಂಬಂಧವು ನೇರವಾಗಿರುತ್ತದೆ. ನಿನ್ನ ಮತ್ತು ಅಲ್ಲಾಹನ ಮಧ್ಯೆ ನಿನಗೆ ಯಾವ ಮಧ್ಯವರ್ತಿಯ ಅವಶ್ಯಕತೆಯೂ ಇಲ್ಲ. ಮನುಷ್ಯರನ್ನು ಆರಾಧ್ಯರನ್ನಾಗಿ ಮಾಡುವುದರಿಂದ ಅಥವಾ ಅಲ್ಲಾಹನ ರುಬೂಬಿಯತ್ ಅಥವಾ ಅವನ

ಉಲೂಹಿಯತ್‌ನಲ್ಲಿ ಇತರರನ್ನು ಸಹಭಾಗಿಯನ್ನಾಗಿ ಮಾಡುವುದರಿಂದ ಇಸ್ಲಾಂ ಧರ್ಮವು ನಮ್ಮನ್ನು ತಡೆಯುತ್ತದೆ.

ಪ್ರವಾದಿ ಮುಹಮ್ಮದ್ (ﷺ) ರವರು ತಂದ ಧರ್ಶಾಸ್ತ್ರವು ಗತ ಧರ್ಮಶಾಸ್ತ್ರಗಳನ್ನು ರದ್ದುಗೊಳಿಸುತ್ತದೆ. ಏಕೆಂದರೆ ಪ್ರವಾದಿ ಮುಹಮ್ಮದ್ (ﷺ) ರವರು ಅಲ್ಲಾಹನ ಬಳಿಯಿಂದ ತಂದ ಇಸ್ಲಾಮೀ ಧರ್ಮಶಾಸ್ತ್ರವು ಪುನರುತ್ಥಾನದವರೆಗೆ ಅಂತಿಮ ಹಾಗೂ ಕೊನೆಯ ಧರ್ಮಶಾಸ್ತ್ರವಾಗಿದೆ ಮತ್ತು ಅದು ಸಕಲ ಲೋಕದವರಿಗಾಗಿ ಕಳುಹಿಸಲಾಗಿದೆ. ಆದುದರಿಂದ ಗತ ಧರ್ಮಶಾಸ್ತ್ರಗಳು ಒಂದು ಇನ್ನೊಂದನ್ನು ರದ್ದುಗೊಳಿಸಿದಂತೆ ಇಸ್ಲಾಮೀ ಧರ್ಮಶಾಸ್ತ್ರವು ತನಗಿಂತ ಮುಂಚಿನ ಎಲ್ಲಾ ಧರ್ಮಶಾಸ್ತ್ರಗಳನ್ನು ರದ್ದುಗೊಳಿಸಿದೆ. ಪರಮ ಪಾವನನಾದ ಅಲ್ಲಾಹನು ಪ್ರವಾದಿ ಮುಹಮ್ಮದ್ (ﷺ) ರವರು ತಂದ ಇಸ್ಲಾಮಿನ ಹೊರತು ಅನ್ಯ ಯಾವುದೇ ಧರ್ಮವನ್ನು

ಸ್ವೀಕರಿಸುವುದಿಲ್ಲ. ಯಾರಾದರೂ ಇಸ್ಲಾಮಿನ ಹೊರತು ಯಾವುದೇ ಅನ್ಯ ಧರ್ಮವನ್ನು ಧರ್ಮವನ್ನಾಗಿ ಸ್ವೀಕರಿಸಿದರೆ ಅದು ಅಲ್ಲಾಹನ ಬಳಿ ಎಂದಿಗೂ ಸ್ವೀ-ಕೃತಾರ್ಹವಲ್ಲ. ಯಾರಾದರೂ ಇಸ್ಲಾಮೀ ಶರಿಯತ್ತಿನ ಕಾನೂನು ನಿಯಮಾವಳಿಗಳನ್ನು ಅರಿಯಲು ಬಯಸುವುದಾದರೆ ಇಸ್ಲಾಂ ಧರ್ಮವನ್ನು ಪರಿಚಯಿಸುವ ವಿಶ್ವಾಸಾರ್ಹ ಪುಸ್ತಕಗಳನ್ನು ಓದಿ ಅರಿಯಬಹುದು.

ಅಲ್ಲಾಹನ ಬಳಿಯಿಂದ ಅವತೀರ್ಣಗೊಂಡ ಗತಕಾಲದ ಎಲ್ಲಾ ಸಂದೇಶಗಳ ಗುರಿಯಂತೆ ಇಸ್ಲಾಂ ಧರ್ಮದ ಗುರಿಯೂ ಅದೇ ಆಗಿದೆ. ಅದೇನೆಂದರೆ: ಸತ್ಯ ಧರ್ಮವು ಮನುಷ್ಯನನ್ನು ಉತ್ತುಂಗಕ್ಕೇರಿಸ-ಬೇಕು. ಆಗ ಅವನು ಸಕಲ ಲೋಕಗಳ ಪರಿಪಾಲಕ ಪ್ರಭುವಾದ ಅಲ್ಲಾಹನ ನಿಷ್ಕಳಂಕ ದಾಸನಾಗುತ್ತಾನೆ ಮತ್ತು ಅದು ಅವನನ್ನು ಮನುಷ್ಯನ ಅಥವಾ ದೆಹೇಚ್ಛೆಗಳ ಅಥವಾ ಮೂಡನಂಬಿಕೆಗಳ ದಾಸ್ಯತ್ವದಿಂದ

ಮುಕ್ತಗೊಳಿಸಬೇಕೆಂಬುದು ಇಸ್ಲಾಮಿನ ಗುರಿಯಾಗಿದೆ.

ಇಸ್ಲಾಮೀ ಧರ್ಮಶಾಸ್ತ್ರವು ಪ್ರತಿಯೊಂದು ಜಾಗ ಹಾಗೂ ಕಾಲಕ್ಕೆ ಯೋಗ್ಯವಾಗಿರುತ್ತದೆ. ಅದರಲ್ಲಿ ಮನುಷ್ಯರ ಸರಿಯಾದ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವುದು ಏನೂ ಇಲ್ಲ. ಏಕೆಂದರೆ ಅದು ಜನರ ಅವಶ್ಯಕತೆಗಳನ್ನು ಅರಿಯುವವನಾದ ಅಲ್ಲಾಹನ ಬಳಿಯಿಂದ ಅವತೀ-ರ್ಣಗೊಂಡದ್ದಾಗಿದೆ. ಜನರಿಗೆ ಸ್ವತಃ ಸರಿಯಾಗಿರುವ, ಪರಸ್ಪರ ವಿರುದ್ಧವಾಗಿರದ ಇಡೀ ಮಾನವ ಕುಲಕ್ಕೆ ಹಿತಾ-ಸಕ್ತಿಯಾಗಿರುವ, ಮನುಷ್ಯರಲ್ಲಿ ಯಾರೊಬ್ಬರೂ ಅದನ್ನು ರಚಿಸದ, ಬದಲಾಗಿ ಅದು ಅಲ್ಲಾಹನಿಂದ ಪಡೆದಿರುವ, ಜನರಿಗೆ ಸನ್ಮಾರ್ಗ ಹಾಗೂ ಸತ್ಕಾರ್ಯದೆಡೆಗೆ ಮಾರ್ಗ-ದರ್ಶಿಸುವ, ಜನರು ತಮ್ಮ ತೀರ್ಪನ್ನು ಅದರೆಡೆಗೆ ಕೊಂಡೊಯ್ದಾಗ ಅವರ ವ್ಯವಹಾರಗಳು ಪರಸ್ಪರರ ಮೇಲೆ ದಬ್ಬಾಳಿಕೆಯಿಂದ ಸುರಕ್ಷಿತವಾಗಿ ನೇರವಾಗಿರುವ ಒಂದು ಧರ್ಮಶಾಸ್ತ್ರದ ಅವಶ್ಯಕತೆಯಿದೆ.

## 7. ಪ್ರವಾದಿ(ﷺ) ರವರ ಬಗ್ಗೆ ಅವರ ವಿರೋಧಿಗಳ ಅಭಿಪ್ರಾಯ ಮತ್ತು ಅವರ ಪರವಾಗಿ ಅವರ(ವಿರೋಧಿಗಳ) ಸಾಕ್ಷಿ

ನಿಸ್ಸಂದೇಹವಾಗಿ ಪ್ರತಿಯೊಬ್ಬ ಪ್ರವಾದಿಗೆ ಅವರ ಸಂದೇ-ಶವಾಹಕತ್ವದ ಮಾರ್ಗದಲ್ಲಿ ಅಡ್ಡಿಯಾಗುವ ಮತ್ತು ಅವರಿಗೆ ವಿರೋಧಿಸುವ ವಿರೋಧಿಗಳಿದ್ದಾರೆ. ಅವರು ಜನರನ್ನು ಆ ಪ್ರವಾದಿಯ ಮೇಲೆ ವಿಶ್ವಾಸವಿಡುವುದರಿಂದ ತಡೆಯುತ್ತಾರೆ. ಪ್ರವಾದಿ ಮುಹಮ್ಮದ್ (ﷺ) ರವರಿಗೆ ಅವರ ಜೀವನದಲ್ಲಿ ಹಾಗೂ ಅವರ ಮರಣದ ನಂತರ ಬಹಳಷ್ಟು ವಿರೋಧಿಗಳಿದ್ದರು. ಖಂಡಿತವಾಗಿಯೂ ಅಲ್ಲಾಹನು ತನ್ನ ಪ್ರವಾದಿಗೆ ಅವರೆಲ್ಲರ ವಿರುದ್ಧ ಸಹಾಯ ಮಾಡಿದನು. ಖಂಡಿತವಾಗಿಯೂ ಮುಹಮ್ಮದ್ (ﷺ) ರವರು ಅಲ್ಲಾಹನ ಪ್ರವಾದಿಯಾಗಿದ್ದಾರೆ ಹಾಗೂ ಗತ ಪ್ರವಾದಿಗಳು ತಂದ ಸಂದೇಶವನ್ನೇ ಇವರೂ ತಂದಿರುತ್ತಾರೆಂದು –ಪ್ರಾಚೀನ ಹಾಗೂ ಆಧುನಿಕ

ಕಾಲದಲ್ಲಿ– ಅವರ ಬಹಳಷ್ಟು ವಿರೋಧಿಗಳ ಸಾಕ್ಷ್ಯ ಎಡೆಬಿಡದೆ ಪರಂಪರಾಗತವಾಗಿ ಬಂದಿದೆ. ಪ್ರವಾ-ದಿಯವರು(ﷺ) ಸತ್ಯಮಾರ್ಗದಲ್ಲಿದ್ದಾರೆಂದು ಅವರು ಅರಿತಿದ್ದರು. ಆದರೆ ಅಧಿಕಾರದ ಆಸೆ ಅಥವಾ ಸಮುದಾಯದವರ ಭಯ ಅಥವಾ ತನ್ನ ಸ್ಥಾನದಿಂದ ಗಳಿಸುವ ಸಂಪತ್ತು ಕಳೆದುಕೊಳ್ಳಬಹುದು ಎಂಬ ಅನೇಕ ಅಡೆತಡೆಗಳು ಅವರಲ್ಲಿ ಅನೇಕರನ್ನು ಪ್ರ-ವಾದಿಯವರ(ﷺ) ಮೇಲೆ ವಿಶ್ವಾಸವಿರಿಸುವುದರಿಂದ ತಡೆಯುತ್ತಿತ್ತು.

ಸರ್ವ ಸ್ತುತಿಗಳು ಸಕಲ ಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ.

# ಅವರು ಮುಹಮ್ಮದ್(ಸ) ರ ಬಗ್ಗೆ ಏನು ಹೇಳುತ್ತಾರೆ?

**ಲ್ಯಾಮರ್ಟೈನ್ ಹೇಳುತ್ತಾರೆ:**

“ಉದ್ದೇಶದ ಪ್ರಾಧಾನ್ಯತೆ, ಉಪಕರಣಗಳ ಮಿತತ್ವ ಮತ್ತು ದಿಗಿಲುಗೊಳಿಸುವಂತಹ ಫಲಿತಾಂಶಗಳು ಒಬ್ಬ ವ್ಯಕ್ತಿಯ ಶ್ರೇಷ್ಠತೆಯನ್ನು ಅಳೆಯಲು ಮೂರು ಮಾನ-ದಂಡಗಳಾಗಿದ್ದರೆ, ಮುಹಮ್ಮದ್(ಸ) ರೊಡನೆ ಆಧುನಿಕ ಇತಿಹಾಸದ ಯಾವುದೇ ಶ್ರೇಷ್ಠ ವ್ಯಕ್ತಿಯನ್ನು ಹೋಲಿಸಲು ಧೈರ್ಯಪಡುವವರು ಯಾರು? ಅತಿಪ್ರಸಿದ್ಧ ಜನರು ಕೇವಲ ಶಸ್ತ್ರಾಸ್ತ್ರ, ಕಾನೂನು ಮತ್ತು ಸಾಮ್ರಾಜ್ಯಗಳನ್ನು ಮಾತ್ರ ನಿರ್ಮಿಸಿದರು. ಕೊನೆಗೆ ಅವರು ಏನನ್ನಾದರೂ ಸಾಧಿಸಿದ್ದರೆ ಅದು ಅವರ ಕಣ್ಣ ಮುಂದೆಯೇ ನಿರಂತರವಾಗಿ ಹೊಸಕಿ ಹಾಕಲಾಗುತ್ತಿದ್ದ ಭೌತಿಕ ಅಧಿ-ಕಾರಗಳಲ್ಲದೆ ಇನ್ನೇನೂ ಆಗಿರಲಿಲ್ಲ.

ಆದರೆ ಈ ವ್ಯಕ್ತಿ (ಮುಹಮ್ಮದ್) ಸೈನ್ಯಗಳನ್ನೂ, ಶಾಸನಗಳನ್ನೂ, ಸಾಮ್ರಾಜ್ಯಗಳನ್ನೂ, ಜನರನ್ನೂ, ರಾಜವಂಶಗಳನ್ನೂ ಮುನ್ನಡೆಸಿದ್ದು ಮಾತ್ರವಲ್ಲದೆ ಅಂದಿನ ಜಾಗತಿಕ ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟಿದ್ದ ಕೋಟ್ಯಂತರ ಜನರನ್ನು ಮುನ್ನಡೆ-ಸಿದ್ದರು. ಅದಕ್ಕಿಂತ ಮಿಗಿಲಾಗಿ ಅವರು (ಜನರಲ್ಲಿ ಮನೆಮಾಡಿದ್ದ) ಬಲಿಪೀಠಗಳು, ದೇವರುಗಳು, ಧರ್ಮಗಳು, ಪರಿಕಲ್ಪನೆಗಳು, ನಂಬಿಕೆಗಳು ಮತ್ತು ಆತ್ಮ-ಗಳೆಲ್ಲವನ್ನೂ ಬದಲಾಯಿಸಿದರು. ಗೆದ್ದಾಗ ಅವರಿಗಿದ್ದ ಆತ್ಮಸಂಯಮ, ಅವರ ಮಹತ್ವಾಕಾಂಕ್ಷೆ, ಎಲ್ಲವನ್ನೂ ಸಂಪೂರ್ಣವಾಗಿ ಒಂದೇ ಗುರಿಯತ್ತ ಸಮರ್ಪಿಸಲಾಗಿ-ತ್ತು. ಇದು ಯಾವುದೇ ರೀತಿಯಲ್ಲೂ ಒಂದು ಸಾಮ್ರಾಜ್ಯ ಸ್ಥಾಪನೆಯತ್ತ ನಡೆಸಿದ ಹೋರಾಟವಾಗಿರಲಿಲ್ಲ. ಅವರ ಕೊನೆಯಿಲ್ಲದ ಪ್ರಾರ್ಥನೆಗಳು, ಅವರು ತಮ್ಮ ದೇವನೊಡನೆ ಮಾಡುವ ನಿಗೂಢ ಸಂಭಾಷಣೆಗಳು,

ಅವರ ಮರಣ ಮತ್ತು ಮರಣಾನಂತರದ ವಿಜಯ, ಎಲ್ಲವೂ ಅವರೊಬ್ಬ ವಿಶಿಷ್ಠ ವ್ಯಕ್ತಿಯಾಗಲು ಬಯಸಿದ ಮೋಸಗಾರನೆಂದು ದೃಢೀಕರಿಸುವುದಿಲ್ಲ. ಬದಲಾಗಿ ಒಂದು ಸಿದ್ಧಾಂತವನ್ನು ಸಂರಕ್ಷಿಸುವುದಕ್ಕಾಗಿ ಅವರಿಗೆ ಶಕ್ತಿ ನೀಡುತ್ತಿರುವ ಒಂದು ಬಲಿಷ್ಠವಾದ ವಿಶ್ವಾಸದಾರ್ಢ್ಯತೆ ಅವರಲ್ಲಿತ್ತೆಂದು ದೃಢೀಕರಿಸುತ್ತದೆ.

ಈ ಸಿದ್ಧಾಂತವು ಎರಡೆಸಲಿನಂತಿದೆ. ದೇವನ ಏಕತ್ವ ಮತ್ತು ದೇವನ ಅಭೌತಿಕತೆ. ಮೊದಲನೆಯದು ದೇವನು ಏನು ಎನ್ನುವುದನ್ನು ಸೂಚಿಸಿದರೆ ಎರಡನೆಯದು ದೇವನು ಏನು ಅಲ್ಲ ಎನ್ನುವುದನ್ನು ಸೂಚಿಸುತ್ತದೆ. ಒಂದು ಖಡ್ಗದೊಂದಿಗೆ ಮಿಥ್ಯ ದೇವರುಗಳನ್ನು ಕಿತ್ತೊಗೆಯುವಾಗ ಇನ್ನೊಂದು ಮಾತುಗಳ ಮೂಲಕ ಚಿಂತನೆಗಳಿಗೆ ಚಾಲನೆ ನೀಡುತ್ತದೆ.

ತತ್ವಜ್ಞಾನಿ, ವಾಗ್ಮಿ, ಧರ್ಮಪ್ರಚಾರಕ, ಶಾಸನಕರ್ತ,

ಯೋಧ, ಊಹೆಗಳನ್ನು ದಮನಿಸಿದವನು, ವೈಚಾರಿಕ ಸಿದ್ಧಾಂತಗಳ, ಪ್ರತಿಮೆಗಳಿಲ್ಲದ ಉಪಾಸನಾ ಪದ್ಧತಿಯ ಸಂರಕ್ಷಕ, ಇಪ್ಪತ್ತು ಭೂಸಾಮ್ರಾಜ್ಯಗಳ ಮತ್ತು ಒಂದು ಆಧ್ಯಾತ್ಮಿಕ ಸಾಮ್ರಾಜ್ಯದ ಸ್ಥಾಪಕ, ಅವರೇ ಮುಹಮ್ಮದ್(ಸ). ಮನುಷ್ಯ ಶ್ರೇಷ್ಠತೆಯನ್ನಳೆಯುವ ಸರ್ವ ಮಾನದಂಡಗಳನ್ನು ಬಳಸಿ ಪರಿಶೋಧಿಸಿದ ಬಳಿಕ ಖಂಡಿತವಾಗಿಯೂ ನಾವು ಕೇಳುವೆವು. ಮುಹಮ್ಮದ್(ಸ) ಗಿಂತಲೂ ಶ್ರೇಷ್ಠ ವ್ಯಕ್ತಿ ಯಾರಾದರೂ ಇದ್ದಾರೆಯೇ?" (Histoire de la Turquie, Paris 1854, Vol II, pp. 276–77)

**ಎಡ್ವರ್ಡ್ ಗಿಬ್ಬನ್ ಮತ್ತು ಸೈಮನ್ ಓಕ್ಲಿ ಹೇಳುತ್ತಾರೆ:**

"ಅವರ ಧರ್ಮ ಪ್ರಚಾರವಲ್ಲ, ಬದಲಾಗಿ ಅವರ ಧರ್ಮದ ಶಾಶ್ವತತೆಯೇ ನಮ್ಮನ್ನು ಅಚ್ಚರಿಗೊಳಿಸು-ತ್ತಿದೆ. ಕುರ್‌ಆನ್‌ನ ಭಾರತೀಯ, ಆಫ್ರಿಕನ್ ಮತ್ತು ತುರ್ಕಿ ಭಾಷಾಂತರಗಳಿಂದ ಉಂಟಾದ ಹನ್ನೆರಡು

ಶತಮಾನಗಳ ಕ್ರಾಂತಿಯ ನಂತರವೂ, ಅವರು ಮಕ್ಕಾ ಮತ್ತು ಮದೀನಾದಲ್ಲಿ ರೂಪ ನೀಡಿದ ಅದೇ ಶುದ್ಧ ಮತ್ತು ಪರಿಪೂರ್ಣ ಧರ್ಮವನ್ನು ಅಚ್ಚಳಿಯದೆ ಸಂರಕ್ಷಿಸಲಾಗಿದೆ.

ತಮ್ಮ ನಂಬಿಕೆ ಮತ್ತು ಭಕ್ತಿಯನ್ನು ಮನುಷ್ಯನ ಇಂದ್ರಿಯ ಮತ್ತು ಕಲ್ಪನೆಗೆ ನಿಲುಕದ ಒಂದು ಮಟ್ಟಕ್ಕೆ ಇಳಿಸುವ ಪ್ರ-ಲೋಭನೆಯನ್ನು ಮಹಮ್ಮದೀಯರು ಸಮರ್ಥವಾಗಿ ಎದುರಿಸಿದ್ದಾರೆ. “ನಾನು ಏಕದೇವನಲ್ಲಿ ವಿಶ್ವಾಸವಿಟ್ಟಿ-ದ್ದೇನೆ ಮತ್ತು ಮುಹಮ್ಮದ್(ಸ) ದೇವನ ಸಂದೇಶವಾ-ಹಕರೆಂದು ವಿಶ್ವಾಸವಿಟ್ಟಿದ್ದೇನೆ, ಇದು ಇಸ್ಲಾಂ ಧರ್ಮದ ಸರಳ ಮತ್ತು ಸ್ಥಿರ ಪ್ರಕಟನೆಯಾಗಿದೆ. ದೇವನ ಬೌದ್ಧಿಕ ರೂಪವನ್ನು ಯಾವುದೇ ಪ್ರತ್ಯಕ್ಷ ಪ್ರತಿಮೆಗಳ ರೂಪದಲ್ಲಿ ಹೀನಾಯಿಸಲಾಗಿಲ್ಲ. ಪ್ರವಾದಿಯ ಗೌರವವು ಮಾನವ ಸಂಪನ್ನತೆಯ ಮಿತಿಯನ್ನು ಮೀರಿಲ್ಲ. ಅವರ ಜೀವಂತ ನಿಯಮ ನಿರ್ದೇಶನಗಳು ವೈಚಾರಿಕ ಮತ್ತು ಧಾರ್ಮಿಕ ಚೌಕಟ್ಟಿನೊಳಗೆ ಅವರ ಶಿಷ್ಯರ ಕೃತಜ್ಞತೆಯನ್ನು

ಸಂರಕ್ಷಿಸಿದೆ.” (History of the Saracen Empire, London, 1870, p. 54)

**ಬಾಸ್ವರ್ಥ್ ಸ್ಮಿತ್ ಹೇಳುತ್ತಾರೆ:**

“ಅವರು ಒಂದೇ ಸಮಯದಲ್ಲಿ ಸೀಸರ್ ಮತ್ತು ಪೋಪ್ ಆಗಿದ್ದರು. ಆದರೆ ಅವರು ಪೋಪ್‌ರ ಹಾವಭಾವಗಳಿಲ್ಲದ ಪೋಪ್ ಮತ್ತು ಸೀಸರ್‌ನ ಸೈನ್ಯವಿಲ್ಲದೆ ಸೀಸರ್ ಆಗಿದ್ದರು. ಅವರಿಗೆ ಸನ್ನದ್ಧ ಸೈನ್ಯವಿಲ್ಲ, ಅಂಗರಕ್ಷಕರಿಲ್ಲ, ಅರಮನೆಯಿಲ್ಲ, ಸ್ಥಿರ ವರಮಾನವಿಲ್ಲ. ತಾನು ಸರಿಯಾದ ದೇವ ನಿರ್ದೇಶನದ ಮೂಲಕ ಆಳ್ವಿಕೆ ನಡೆಸುತ್ತಿದ್ದೇನೆ ಎಂದು ಹೇಳುವ ಹಕ್ಕನ್ನು ಯಾರಾದರೂ ಹೊಂದಿದ್ದರೆ, ಅದು ಮುಹಮ್ಮದ್(ಸ) ಮಾತ್ರ. ಏಕೆಂದರೆ ಅವರು ಉಪಕರಣರಹಿತವಾದ ಮತ್ತು ಬೆಂಬಲರಹಿತವಾದ ಎಲ್ಲಾ ಶಕ್ತಿಯನ್ನೂ ಹೊಂದಿದ್ದರು.” (Mohammed and Mohammadanism, London 1874, p. 92)

**ಆನಿ ಬೆಸಂಟ್ ಬರೆಯುತ್ತಾರೆ:**

"ಅರೇಬಿಯಾದ ಮಹಾನ್ ಪ್ರವಾದಿಯ ಜೀವನ ಮತ್ತು ಪಾತ್ರವನ್ನು ಅಧ್ಯಯನ ಮಾಡುವ, ಅವರು ಹೇಗೆ ಕಲಿಸಿದರು ಮತ್ತು ಹೇಗೆ ಬದುಕಿದರು ಎಂದು ತಿಳಿದಿರುವ ಎಲ್ಲರಿಗೂ, ಮಹಾನ್ ಸಂದೇಶವಾಹಕರಲ್ಲಿ ಒಬ್ಬರಾದ ಆ ಮಹಾ ಪ್ರವಾದಿಯ ಬಗ್ಗೆ ಗೌರವವಲ್ಲದೆ ಇನ್ನೇನೂ ಉಂಟಾಗುವುದು ಸಾಧ್ಯವಿಲ್ಲ. ನಾನು ನಿಮಗೆ ತಿಳಿಸುವ ವಿಷಯಗಳಲ್ಲಿ, ಅನೇಕ ಜನರಿಗೆ ಈಗಾಗಲೇ ತಿಳಿದಿರುವ ಹಲವಾರು ವಿಷಯಗಳಿವೆ. ಆದರೂ ನಾನು ಅವುಗಳನ್ನು ಪುನಃ ಪುನಃ ಓದುವಾಗಲೆಲ್ಲಾ, ಆ ಮಹಾ ಅರೇಬಿಯನ್ ಶಿಕ್ಷಕರಿಗೆ ಹೊಸ ರೀತಿಯ ಮೆಚ್ಚುಗೆ ಮತ್ತು ಹೊಸ ರೀತಿಯ ಗೌರವವನ್ನು ನಾನು ಅನುಭವಿಸುತ್ತೇನೆ." (The Life and Teachings of Muhammad, Madras 1932, p. 4)

**ಡಬ್ಲ್ಯೂ. ಮಾಂಟ್‌ಗೊಮೆರಿ ಹೇಳುತ್ತಾರೆ:**

"ತನ್ನ ನಂಬಿಕೆಗಳಿಗಾಗಿ ಹಿಂಸೆಗೆ ಒಳಗಾಗಲು ಸಿದ್ಧರಾಗುವ ಅವರ ಮನಸ್ಥಿತಿ, ತನ್ನನ್ನು ನಂಬಿದ ಮತ್ತು ತನ್ನನ್ನು ನಾಯಕನಾಗಿ ಮಾಡಿದ ಅನುಯಾ-ಯಿಗಳೊಡನೆ ಅವರಿಗಿದ್ದ ಉನ್ನತ ನೈತಿಕ ಗುಣ, ಅವರ ಅಂತಿಮ ಸಾಧನೆಯ ಹಿರಿಮೆ – ಎಲ್ಲವೂ ಅವರನ್ನು ಒಬ್ಬ ಮೋಸಗಾರ ಎಂದು ಭಾವಿಸಿದರೆ ಹೆಚ್ಚು ಸಮಸ್ಯೆ-ಗಳನ್ನು ಹುಟ್ಟುಹಾಕುತ್ತವೆಯೇ ಹೊರತು ಅವುಗಳನ್ನು ಪರಿಹರಿಸುವುದಿಲ್ಲ. ಮಾತ್ರವಲ್ಲ, ಪಾಶ್ಚಿಮಾತ್ಯರ-ಲ್ಲಿ ಮುಹಮ್ಮದ್(ಸ) ರಂತೆ ಬಹಳ ಕಡಿಮೆ ಮೆಚ್ಚುಗೆ ಪಡೆದ ಇತಿಹಾಸದ ಯಾವುದೇ ಮಹಾನ್ ವ್ಯಕ್ತಿಗಳಿಲ್ಲ." (Mohammad at Mecca, Oxford 1953, p. 52)

**ಜೇಮ್ಸ್ ಎ. ಮೈಕೆನರ್ ಬರೆಯುತ್ತಾರೆ:**

"ಇಸ್ಲಾಂ ಧರ್ಮದ ಸ್ಥಾಪಕರಾದ ಮುಹಮ್ಮದ್(ಸ)

ರು, ಕ್ರಿ.ಶ. 571 ರಲ್ಲಿ ವಿಗ್ರಹಗಳನ್ನು ಪೂಜಿಸುವ ಅರೇಬಿಯನ್ ಬುಡಕಟ್ಟು ಜನಾಂಗದಲ್ಲಿ ಜನಿಸಿದರು. ಹುಟ್ಟಿನಿಂದಲೇ ಅನಾಥರಾಗಿದ್ದ ಅವರು ಯಾವಾಗಲೂ ಬಡವರು, ನಿರ್ಗತಿಕರು, ವಿಧವೆಯವರು, ಅನಾಥರು, ಗುಲಾಮರು ಮತ್ತು ದೀನ ದಲಿತರ ಬಗ್ಗೆ ಅನುಕಂಪ ಹೊಂದಿದ್ದರು. ಇಪ್ಪತ್ತನೇ ವಯಸ್ಸಿನಲ್ಲಿ ಅವರು ಒಬ್ಬ ಯಶಸ್ವಿ ಉದ್ಯಮಿಯಾಗಿದ್ದರು. ನಂತರ ಅವರು ಒಬ್ಬ ಶ್ರೀಮಂತ ವಿಧವೆಯ ವ್ಯಾಪಾರ ತಂಡದ ನಿರ್ದೇಶಕ-ರಾದರು. ಅವರು ಇಪ್ಪತ್ತೈದನೇ ಹರೆಯಕ್ಕೆ ತಲುಪಿದಾಗ, ಅವರ ಅರ್ಹತೆಯನ್ನು ಗುರುತಿಸಿ ಅವರ ಮಾಲಕಿ ಅವರ ಮುಂದೆ ವಿವಾಹ ಪ್ರಸ್ತಾವನ್ನಿಟ್ಟರು. ಆಕೆ ತನಗಿಂತ ಹದಿನೈದು ವರ್ಷ ದೊಡ್ಡವಳಾಗಿದ್ದರೂ, ಅವರು ಆಕೆಯನ್ನು ಮದುವೆಯಾಗಿ ಆಕೆಯ ಮರಣದ ತನಕ ಶ್ರದ್ಧಾವಂತ ಗಂಡನಾಗಿ ಉಳಿದರು.

ಇತರೆಲ್ಲಾ ಪ್ರಮುಖ ಪ್ರವಾದಿಗಳಂತೆ, ಮುಹಮ್ಮದ್(ಸ)

ಕೂಡ ತಮ್ಮ ಅಸಮರ್ಪಕತೆಯನ್ನು ಗ್ರಹಿಸಿ, ದೇವರ ವಾಕ್ಯವನ್ನು ತಲುಪಿಸುವ ಕೆಲಸವನ್ನು ಸ್ವೀಕರಿಸಲು ಮೊದಲು ಮುಂದಾಗಲಿಲ್ಲ. ಆದರೆ ದೇವದೂತರು ಅವರೊಡನೆ "ಓದು" ಎಂದರು. ನಮಗೆ ತಿಳಿದಿರುವ ಮಟ್ಟಿಗೆ, ಮುಹಮ್ಮದ್(ಸ) ರಿಗೆ ಓದು ಬರಹ ತಿಳಿದಿಲ್ಲ. ಆದರೆ ಅವರು ಅನಂತರ ಭೂಮಿಯ ಒಂದು ದೊಡ್ಡ ಭಾಗವನ್ನು ಕ್ರಾಂತೀಕರಿಸುವ "ದೇವರು ಒಬ್ಬನೇ" ಎಂಬ ದೈವಿಕ ಸಂದೇಶವನ್ನು ಓದಿಕೊಡಲು ಆರಂಭಿಸಿದರು.

ಎಲ್ಲ ವಿಷಯಗಳಲ್ಲೂ ಮುಹಮ್ಮದ್(ಸ) ಸಂಪೂರ್ಣ ಪ್ರಾಯೋಗಿಕವಾಗಿದ್ದರು. ಅವರ ಪ್ರೀತಿಯ ಮಗ ಇಬ್ರಾಹಿಂ ಮರಣಹೊಂದಿದಾಗ, ಸೂರ್ಯ ಗ್ರಹಣ ಸಂಭವಿಸಿತು. ಅದು ಮಗುವಿನ ಮರಣಕ್ಕೆ ದೇವನು ಸೂಚಿಸಿದ ಸಂತಾಪವೆಂಬ ವದಂತಿ ಹಬ್ಬತೊಡಗಿತು. ಆಗ ಮುಹಮ್ಮದ್(ಸ) ರವರು ಹೀಗೆ ಘೋಷಿಸಿದರೆಂದು ಹೇಳಲಾಗುತ್ತದೆ, 'ಗ್ರಹಣವು ನೈಸರ್ಗಿಕ

ವಿದ್ಯಮಾನವಾಗಿದೆ. ಅಂತಹ ಸಂಗತಿಗಳನ್ನು ಒಬ್ಬ ಮನುಷ್ಯನ ಹುಟ್ಟು ಅಥವಾ ಸಾವಿಗೆ ಜೋಡಿಸುವುದು ಮೂರ್ಖತನವಾಗಿದೆ.”

ಮುಹಮ್ಮದ್(ಸ) ಮರಣ ಹೊಂದಿದಾಗ ಅವರನ್ನು ದೈವತ್ವಕ್ಕೇರಿಸುವ ಪ್ರಯತ್ನ ಮಾಡಲಾಯಿತು, ಆದರೆ ಅವರ ಆಡಳಿತಾತ್ಮಕ ಉತ್ತರಾಧಿಕಾರಿಯಾಗಬೇಕಿದ್ದ ವ್ಯಕ್ತಿ ಧಾರ್ಮಿಕ ಇತಿಹಾಸದಲ್ಲಿ ಹಿಂದೆಂದೂ ಕಾಣದ ಒಂದು ಶ್ರೇಷ್ಠ ಭಾಷಣ ಮಾಡಿ ಆ ಪ್ರಯತ್ನವನ್ನು ವಿಫಲಗೊಳಿಸಿದರು: “ನಿಮ್ಮಲ್ಲಿ ಯಾರಾದರೂ ಮುಹಮ್ಮದ್(ಸ) ರನ್ನು ಆರಾಧಿಸುವವರಿದ್ದರೆ, ಇದೋ ಮುಹಮ್ಮದ್(ಸ) ಮರಣ-ಹೊಂದಿದ್ದಾರೆ. ಆದರೆ ನೀವು ಆರಾಧಿಸುವುದು ಅಲ್ಲಾಹನನ್ನಾಗಿದ್ದರೆ ಅವನು ಶಾಶ್ವತವಾಗಿ ಜೀವಿಸುವವನಾಗಿದ್ದಾನೆ." (Islam: The Misunderstood Religion in Reader's Digest (American Edition), May 1955, pp. 68–70)

**ಮೈಕಲ್ ಎಚ್ ಹಾರ್ಟ್ ಹೇಳುತ್ತಾರೆ:**

"ಜಗತ್ತಿನ ಅತಿಪ್ರಭಾವಶಾಲಿ ಜನರ ಯಾದಿಯಲ್ಲಿ ನಾನು ಮುಹಮ್ಮದ್(ಸ) ರ ಹೆಸರನ್ನು ಮೊಟ್ಟಮೊದಲು ಸೂಚಿಸಿರುವುದು ಅನೇಕರನ್ನು ವಿಸ್ಮಯಗೊಳಿಸಬಹುದು ಮತ್ತು ಇತರರನ್ನು ಪ್ರಶ್ನಿಸುವಂತೆ ಮಾಡಬಹುದು. ಆದರೆ ಇತಿಹಾಸದಲ್ಲಿ ಧಾರ್ಮಿಕ ಮತ್ತು ಧರ್ಮಾತೀತ ಮಟ್ಟಗಳಲ್ಲಿ ಪೂರ್ಣ ಯಶಸ್ಸು ಸಾಧಿಸಿದ್ದು ಅವರೊಬ್ಬರೇ ಆಗಿದ್ದಾರೆ." (The 100: A Ranking of the Most Influential Persons in History, New York: Hart Publishing Company, Inc. 1978, p. 33)

**ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ ಹೇಳುತ್ತದೆ:**

"...ಅವರು ಪ್ರಾಮಾಣಿಕ ಮತ್ತು ಸರಳ ಜನರ ಗೌರವ ಹಾಗೂ ವಿಶ್ವಾಸವನ್ನು ಗೆದ್ದ ಅತ್ಯಂತ ಪ್ರಾಮಾಣಿಕ ಹಾಗೂ ಸರಳ ವ್ಯಕ್ತಿಯಾಗಿದ್ದರೆಂದು ಪ್ರಾಥಮಿಕ

ಮೂಲಗಳಲ್ಲಿರುವ ಹೇರಳ ವಿವರಣೆಗಳು ತೋರಿಸುತ್ತವೆ.” (Vol 12)

**ಪ್ರವಾದಿ ಮುಹಮ್ಮದ್(ಸ) ರ ಬಗ್ಗೆ ಮಾತನಾಡುತ್ತಾ ಜಾರ್ಜ್ ಬರ್ನಾರ್ಡ್ ಶಾ ಹೇಳುತ್ತಾರೆ:**

“ಅವರನ್ನು ಮಾನವೀಯತೆಯ ಸಂರಕ್ಷಕನೆಂದೇ ಕರೆಯಬೇಕು. ಅವರಂತಹ ಒಬ್ಬ ವ್ಯಕ್ತಿ ಆಧುನಿಕ ಜಗತ್ತಿನ ಸರ್ವಾಧಿಕಾರವನ್ನು ವಹಿಸಿಕೊಂಡರೆ, ಜಗತ್ತಿಗೆ ಅತ್ಯಂತ ಅಗತ್ಯವಿರುವ ಶಾಂತಿ ಮತ್ತು ಸಂತೋಷವನ್ನು ತರುವಂತಹ ರೀತಿಯಲ್ಲಿ ಅದರ ಸಮಸ್ಯೆಗಳನ್ನು ಪರಿಹ-ರಿಸುವುದರಲ್ಲಿ ಅವರು ಯಶಸ್ವಿಯಾಗುವರೆಂದು ನಾನು ನಂಬುತ್ತೇನೆ.” (The Genuine Islam, Singapore, Vol. 1, No. 8, 1936)

**ಮುಹಮ್ಮದ್(ಸ) ರ ಸ್ವಭಾವದ ಬಗ್ಗೆ ಮಾತನಾಡುತ್ತಾ ಮಹಾತ್ಮ ಗಾಂಧಿ 'ಯಂಗ್ ಇಂಡಿಯಾ'ದಲ್ಲಿ ಹೇಳುತ್ತಾರೆ:**

“ಮಾನವ ಸಮೂಹದ ಕೋಟ್ಯಂತರ ಹೃದಯಗಳಲ್ಲಿ ವಿವಾದರಹಿತವಾಗಿ ಪ್ರಭುತ್ವ ಸ್ಥಾಪಿಸಿದ ಒಬ್ಬ ಅತ್ಯುನ್ನತ ವ್ಯಕ್ತಿಯ ಬಗ್ಗೆ ತಿಳಿಯಬಯಸಿದ್ದೆ.... ಅಂದಿನ ಜೀವನ ರಂಗದಲ್ಲಿ ಇಸ್ಲಾಮಿಗೆ ಸ್ಥಾನವನ್ನು ಗಳಿಸಿಕೊಟ್ಟದ್ದು ಖಡ್ಗವಲ್ಲ ಬದಲಾಗಿ ಪ್ರವಾದಿಯ ತೀವ್ರ ನಿರಾಡಂಬರತೆ, ಸಂಪೂರ್ಣ ನಿಷ್ಕಾಪಟ್ಯತೆ, ವಾಗ್ದಾನಗಳ ಬಗ್ಗೆ ಆತ್ಯಂತಿಕ ನಿಷ್ಠೆ, ಸ್ನೇಹಿತರು ಮತ್ತು ಅನುಯಾಯಿಗಳಿಗೆ ಅವರು ನೀಡುತ್ತಿದ್ದ ತೀವ್ರ ಪರಿಗಣನೆ, ಧರ್ಮಪ್ರಚಾರ ಕಾರ್ಯದ ಬಗ್ಗೆ ಅವರಿಗಿದ್ದ ಎದೆಗಾರಿಕೆ, ನಿರ್ಭೀತಿ ಮತ್ತು ದೇವನಲ್ಲಿದ್ದ ಸಂಪೂರ್ಣ ನಂಬಿಕೆ ಮತ್ತು ಭರವಸೆಗಳಾಗಿದ್ದವು ಎಂಬ ವಾಸ್ತವವನ್ನು ನಾನು ಚೆನ್ನಾಗಿ ಮನದಟ್ಟುಮಾ-ಡಿಕೊಂಡೆ. ಅವರ ಮುಂದಿದ್ದ ಸರ್ವ ಅಡೆತಡೆಗಳನ್ನು

ನಿವಾರಿಸಿದ ಅಸ್ತ್ರ ಇವುಗಳಾಗಿದ್ದವೇ ಹೊರತು ಖಡ್ಗವಾ-ಗಿರಲಿಲ್ಲ. ನಾನು (ಪ್ರವಾದಿ ಜೀವನಚರಿತ್ರೆಯ) ಎರಡನೇ ಭಾಗವನ್ನು ಓದಿ ಮುಚ್ಚಿದಾಗ ಆ ಶ್ರೇಷ್ಠ ಜೀವನದ ಬಗ್ಗೆ ಇನ್ನೇನೂ ಓದಲು ಉಳಿದಿಲ್ಲವೆಂದು ಮರುಕಪಟ್ಟಿದ್ದೆ."

**ಥಾಮಸ್ ಕಾರ್ಲೈಲ್ ತಮ್ಮ ಹೀರೋಸ್ & ಹೀರೋ ವರ್ಷಿಪ್ ಎಂಬ ಪುಸ್ತಕದಲ್ಲಿ ಸುಮ್ಮನೆ ಅಚ್ಚರಿಪಡುತ್ತಾ ಹೇಳುತ್ತಾರೆ:**

"ಒಬ್ಬ ವ್ಯಕ್ತಿ ಒಂಟಿಯಾಗಿ ಯುದ್ಧನಿರತ ಜನಾಂಗಗಳನ್ನೂ, ಅಲೆಮಾರಿ ಅರಬಿಗಳನ್ನೂ ಎರಡು ದಶಕಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಒಂದು ಸುದೃಢ ಮತ್ತು ಸುಸಂಸ್ಕೃತ ರಾಷ್ಟ್ರವನ್ನಾಗಿ ಪರಿವರ್ತಿಸಿದ್ದಾದರೂ ಹೇಗೆ?"

**ದೀವಾನ್ ಚಂದ್ ಶರ್ಮಾ ಹೇಳುತ್ತಾರೆ:**

"ಮುಹಮ್ಮದ್(ಸ) ಕರುಣೆಯ ಆತ್ಮವಾಗಿದ್ದರು. ಅವರ ಸುತ್ತಮುತ್ತಲಿದ್ದ ಜನರು ಅವರ ಪ್ರಭಾವವನ್ನು

ಅನುಭವಿಸಿದರು. ಅವರದನ್ನು ಮರೆಯಲೇ ಇಲ್ಲ." (The Prophet of the East, Calcutta, 1935, pp. 12)

**ಭಾರತದ ಪ್ರಸಿದ್ಧ ಕವಯಿತ್ರಿ ಸರೋಜಿನಿ ನಾಯ್ಡು, ಇಸ್ಲಾಮಿನಲ್ಲಿ ದೇವನ ಮುಂದೆ ನಿಲ್ಲುವ 'ಸಮಾನತೆ'ಯ ನೋಟವನ್ನು ವೀಕ್ಷಿಸುತ್ತಾ ಹೇಳುತ್ತಾರೆ:**

"ಇಸ್ಲಾಮ್ ಪ್ರಜಾಪ್ರಭುತ್ವವನ್ನು ಬೋಧಿಸಿ ಕಾರ್ಯರೂಪಕ್ಕೆ ತಂದ ಪ್ರಪ್ರಥಮ ಧರ್ಮವಾಗಿದೆ. ಮಸೀದಿಯಿಂದ ಪ್ರಾರ್ಥನೆಗೆ ಕರೆ ನೀಡುವಾಗ ಭಕ್ತರೆಲ್ಲರೂ ಸಾಲುಸಾಲಾಗಿ ಸೇರಿ, ರೈತ ರಾಜನೆಂಬ ವ್ಯತ್ಯಾಸವಿಲ್ಲದೆ ಭುಜಕ್ಕೆ ಭುಜ ಸೇರಿಸಿ, ದೇವನ ಮುಂದೆ ಸಾಷ್ಟಾಂಗ-ವೆರಗುತ್ತಾ 'ದೇವನೊಬ್ಬನೇ ದೊಡ್ಡವನು' ಎನ್ನುವಾಗ ಇಸ್ಲಾಮಿನ ಪ್ರಜಾಪ್ರಭುತ್ವವು ದಿನನಿತ್ಯ ಐದು ಬಾರಿ ಪ್ರಕ-ಟವಾಗುತ್ತದೆ. ಮನುಷ್ಯನನ್ನು ಜನ್ಮತಃ ಸಹೋದರನೆಂದು ಪರಿಗಣಿಸುವ ಇಸ್ಲಾಮಿನ ಈ ಅವಿಭಾಜ್ಯ ಐಕ್ಯತೆಯು ನನ್ನನ್ನು ಪದೇ ಪದೇ ದಿಗ್ಭ್ರಮೆಗೊಳಿಸುತ್ತಿದೆ." (Ideals

of Islam, vide Speeches  Writings, Madras, 1918 , p. 169)

**ತತ್ವಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ.ಕೆ.ಎಸ್. ರಾಮಕೃಷ್ಣ ರಾವ್ ತಮ್ಮ** (Muhammad, The Prophet of Islam) **ಎಂಬ ಪುಸ್ತಕದಲ್ಲಿ ಮುಹಮ್ಮದ್(ಸ) ರನ್ನು "ಮಾನವ ಜೀವನಕ್ಕೆ ಪರಿಪೂರ್ಣ ಮಾದರಿ" ಎಂದು ಕರೆಯುತ್ತಾರೆ.**

ನಂತರ ಪ್ರೊ.ರಾಮಕೃಷ್ಣ ರಾವ್ ತಮ್ಮ ಅನಿಸಿಕೆಯನ್ನು ಹೀಗೆ ವ್ಯಕ್ತಿಪಡಿಸುತ್ತಾರೆ:

"ಮುಹಮ್ಮದ್(ಸ) ರ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ತಿಳಿಯುವುದು ಬಹಳ ಕಷ್ಟ. ಅದರ ಒಂದು ಅಂಶವನ್ನು ಮಾತ್ರ ಗ್ರಹಿಸಲು ನನಗೆ ಸಾಧ್ಯವಾಗಿದೆ. ಅತಿ ಸುಂದರವಾದ ದೃಶ್ಯಗಳ ಎಂತಹ ಪ್ರಚಂಡ ಅನುಕ್ರಮ! ಅಲ್ಲಿ ಮುಹಮ್ಮದ್ ಎಂಬ ಪ್ರವಾದಿಯನ್ನು

ಕಾಣಬಹುದು. ಅಲ್ಲಿ ಮುಹಮ್ಮದ್ ಎಂಬ ಯೋಧ, ಮುಹಮ್ಮದ್ ಎಂಬ ಉದ್ಯಮಿ, ಮುಹಮ್ಮದ್ ಎಂಬ ಆಡಳಿತಗಾರ, ಮುಹಮ್ಮದ್ ಎಂಬ ವಾಗ್ಮಿ, ಮುಹಮ್ಮದ್ ಎಂಬ ಸುಧಾರಕ, ಮುಹಮ್ಮದ್ ಎಂಬ ಅನಾಥರ ಪೋಷಕ, ಮುಹಮ್ಮದ್ ಎಂಬ ಗುಲಾಮರ ರಕ್ಷಕ, ಮುಹಮ್ಮದ್ ಎಂಬ ಮಹಿಳೆಯರ ವಿಮೋಚಕ, ಮುಹಮ್ಮದ್ ಎಂಬ ನ್ಯಾಯಾಧೀಶ, ಮುಹಮ್ಮದ್ ಎಂಬ ಸಂತನನ್ನೂ ಕಾಣಬಹುದು. ಒಟ್ಟಾರೆಯಾಗಿ, ಮಾನವ ಚಟುವಟಿಕೆಗಳ ಈ ಎಲ್ಲಾ ಕ್ಷೇತ್ರಗಳಲ್ಲಿ ಅವರು ವಹಿಸಿದ ಎಲ್ಲಾ ಪಾತ್ರಗಳಲ್ಲೂ ಅವರೊಬ್ಬ ವೀರನಂತೆ ಕಂಗೊಳಿಸುತ್ತಾರೆ.

**ಬಹುಶಃ ಇದುವರೆಗಿನ ಶ್ರೇಷ್ಠ ಯುರೋಪಿಯನ್ ಕವಿಯೆಂದು ಪರಿಗಣಿಸಲಾಗುವ ವೋಲ್ಫ್ ಗ್ಯಾಂಗ್ ಗೋಥೆ ಹೇಳುತ್ತಾರೆ:**

"ಅವರೊಬ್ಬ ಪ್ರವಾದಿಯೇ ಹೊರತು ಕವಿಯಲ್ಲ.

ಆದ್ದರಿಂದ ಅವರು ತಂದ ಕುರ್‌ಆನ್ ಎಂಬ ಗ್ರಂಥವನ್ನು ದೈವಿಕ ಕಾನೂನು ಎಂಬ ದೃಷ್ಟಿಯಲ್ಲಿ ನೋಡಬೇಕೇ ವಿನಾ ಶಿಕ್ಷಣ ಅಥವಾ ಮನರಂಜನೆಗಾಗಿ ರಚಿಸಿದ ಮಾನವ ನಿರ್ಮಿತ ಪುಸ್ತಕವಾಗಿ ನೋಡಬಾರದು." (Noten und Abhandlungen zum Westlichen Divan, WA I, 7, 32)

ಒಬ್ಬ ಚಿಂತಕ ಮತ್ತು ಕಾಳಜಿಯುಳ್ಳ ವ್ಯಕ್ತಿಯಾಗಿ ಕನಿಷ್ಠ ನೀವು ಮಾಡಬಹುದಾದ ಕೆಲಸ ಒಂದು ಕ್ಷಣ ನಿಂತು ನಿಮ್ಮನ್ನು ನೀವೇ ಕೇಳಿಕೊಳ್ಳುವುದು: ಈ ಅಸಾಧಾರಣ ಮತ್ತು ಕ್ರಾಂತಿಕಾರಿ ಹೇಳಿಕೆಗಳು ನಿಜವಾಗಿಯೂ ಸತ್ಯವಾಗಿರಬಹುದೇ?

ಬಹುಶಃ ಅವೆಲ್ಲವೂ ಸತ್ಯವಾಗಿದ್ದು ನೀವು ಪ್ರವಾದಿ ಮುಹಮ್ಮದ್ (ಸ) ರ ಬಗ್ಗೆ ತಿಳಿಯದಿರಬಹುದು. ಹಾಗಾದರೆ ಅವರನ್ನು ತಿಳಿಯಲು ಸ್ವಲ್ಪ ಪ್ರಯತ್ನ

ಮಾಡುವ ಮೂಲಕ ಈ ಪ್ರಚಂಡ ಸವಾಲಿಗೆ ನೀವು ಪ್ರತಿಕ್ರಿಯಿಸಬಾರದೇಕೆ? ಇದರಿಂದ ನಿಮಗೆ ಏನೂ ನಷ್ಟವಿಲ್ಲ. ಆದರೆ ಅದು ನಿಮ್ಮ ಜೀವನದಲ್ಲಿ ಒಂದು ಹೊಸ ಅಧ್ಯಾಯವನ್ನು ತೆರೆಯಲು ಕಾರಣವಾಗಬಹುದು.

يوزع مجاناً ولا يباع

برائے مفت تقسیم

For Free Distribution Only - Not for Sale

ಉಚಿತ ವಿತರಣೆಗಾಗಿ - ಮಾರಾಟ ಮಾಡಬಾರದು


**CIS (Centre for Islamic Studies) Welfare Trust®**

First Floor, Masjid e Munawwara Complex

North Road, Cooke Town, Bengaluru - 560 084

+91 80 2546 6926 cisblr@yahoo.co.in www.ciswt.in